

# ಕರ್ಮಣಿ

# KARMANI

## ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ನಿಯಮಿತ



# ಕರ್ಮಣಿ
# KARMANI

## ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ನಿಯಮಿತ



# ಕರ್ಮಣಿ
# KARMANI

## ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ನಿಯಮಿತ



# ಕರ್ಮಣಿ
# KARMANI

## ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ನಿಯಮಿತ



# ಕರ್ಮಣಿ
# KARMANI

## ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ನಿಯಮಿತ



ಪ್ರಗತಿ ಪಥದತ್ತ ಮಹಿಳೆ

## ಪೀಠಿಕೆ:

ಕರ್ನಾಟಕ ರಾಜ್ಯದಲ್ಲಿನ ಬಡ ಮಹಿಳೆಯರ ಅಭಿವೃದ್ಧಿಗಾಗಿ ''ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ನಿಯಮಿತ (ಕರ್ಮಣಿ)'' 1987 ರಲ್ಲಿ ''ಕಂಪನಿಗಳ ಕಾಯ್ದೆ 1956'' ರ ಅಡಿಯಲ್ಲಿ ಸ್ಥಾಪಿಸಲ್ಪಟ್ಟಿತು. ನಿಗಮದ ಕಾರ್ಯಕ್ರಮಗಳು ಮುಖ್ಯವಾಗಿ ಬಡತನದ ರೇಖೆಗಿಂತ ಕೆಳಗಿರುವ ಅಥವಾ ಬಡತನದ ಅಂಚಿನಲ್ಲಿರುವ ಮಹಿಳೆಯರು, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಅಲ್ಪಸಂಖ್ಯಾತರು, ಹಿಂದುಳಿದ ವರ್ಗ ಮತ್ತು ಮಧ್ಯಮ ವರ್ಗದ ಮಹಿಳೆಯರ ಪ್ರಗತಿಯ ಮೇಲೆ ಕೇಂದ್ರಿಕೃತವಾಗಿದೆ. ನಿಗಮದ ಕೇಂದ್ರ ಕಛೇರಿಯು 16ನೇ ಮಹಡಿ, ಪಬ್ಲಿಕ್ ಯುಟಿಲಿಟಿ ಬಿಲ್ಡಿಂಗ್, ಮಹಾತ್ಮಾ ಗಾಂಧಿ ರಸ್ತೆ, ಬೆಂಗಳೂರು-560 001 ವಿಳಾಸದಲ್ಲಿದೆ. ಜಿಲ್ಲಾ ಮಟ್ಟದಲ್ಲಿ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಾಯಕ ನಿರ್ದೇಶಕರನ್ನು ಮಹಿಳಾ ಅಭಿವೃದ್ಧಿ ನಿಗಮದ ಪದನಿಮಿತ್ತ ಜಿಲ್ಲಾ ವ್ಯವಸ್ಥಾಪಕರಾಗಿಯೂ ಮತ್ತು ಜಿಲ್ಲಾ ಕೈಗಾರಿಕಾ ಕೇಂದ್ರದ ಪ್ರಧಾನ ವ್ಯವಸ್ಥಾಪಕರನ್ನು ಪದನಿಮಿತ್ತ ಪ್ರಧಾನ ವ್ಯವಸ್ಥಾಪಕರು ಎಂದು ನೇಮಿಸಲಾಗಿದೆ. ಸದರಿ ಅಧಿಕಾರಿಗಳ ಜಿಲ್ಲಾ ಮಟ್ಟದ ಕಛೇರಿಗಳು ಜಿಲ್ಲೆಗಳಲ್ಲಿ ನಿಗಮದ ಸಂಪರ್ಕ ಕಛೇರಿಗಳಾಗಿರುತ್ತವೆ.

## ಉದ್ದೇಶಗಳು:

- ಆದಾಯ ಉತ್ಪನ್ನಕರ ಚಟುವಟಿಕೆಗಳನ್ನು ಬೆಂಬಲಿಸುವಂತಹ ಯೋಜನೆಗಳಿಗೆ ಉತ್ತೇಜನ ನೀಡುವುದು, ದುರ್ಬಲ ವರ್ಗಗಳಿಗೆ ಮೀಸಲಾಗಿರುವ ಯೋಜನೆಗಳಡಿಯಲ್ಲಿ ಪ್ರಯೋಜನ ಪಡೆಯಲು ಅರ್ಹತೆ ಇರುವ ಮಹಿಳೆಯರಿಗೆ ಆದ್ಯತೆ ನೀಡುವುದು.
- ಸಲಹಾ ಸೇವೆಯನ್ನು ಒದಗಿಸುವುದು.
- ಬ್ಯಾಂಕ್ ಹಾಗೂ ಇತರೆ ಆರ್ಥಿಕ ಸಂಸ್ಥೆಗಳಲ್ಲಿ ಲಭ್ಯವಿರುವ ಸಾಲವನ್ನು ಒದಗಿಸುವಲ್ಲಿ ಅನುಕೂಲ ಕಲ್ಪಿಸುವುದು.
- ತರಬೇತಿ ಕಾರ್ಯಕ್ರಮಗಳನ್ನು ನಿರ್ವಹಿಸುವುದು.
- ಮಹಿಳೆಯರಿಗಾಗಿ ಮಾರುಕಟ್ಟೆ ಸೌಲಭ್ಯದ ವ್ಯವಸ್ಥೆಯನ್ನು ಅಭಿವೃದ್ಧಿಗೊಳಿಸುವುದು.
- ಮಹಿಳಾ ಸಂಘಗಳನ್ನು, ಸಮಾಜಗಳನ್ನು, ಮಂಡಳಿಗಳನ್ನು, ಸಹಕಾರಿಗಳನ್ನು ಉತ್ತೇಜಿಸುವುದು ಹಾಗೂ ಬಲಪಡಿಸುವುದು ಮತ್ತು ಅವುಗಳ ಮೂಲಕ ಮಹಿಳಾ ಉದ್ಯಮಿಗಳನ್ನು ಗುರುತಿಸುವುದು.
- ಆರ್ಥಿಕ ಅಭಿವೃದ್ಧಿಗಾಗಿ ಸಣ್ಣ, ಅತಿ ಸಣ್ಣ ಕೈಗಾರಿಕಾ ಘಟಕಗಳಿಗೆ ಸಹಾಯ ಒದಗಿಸುವುದು.
- ಮಹಿಳೆಯರನ್ನು ಕೈಗಾರಿಕೆ, ವ್ಯಾಪಾರ ಮತ್ತು ಸೇವಾ ಉದ್ದಿಮೆಗಳಲ್ಲಿ ತೊಡಗಿಸಲು ಉತ್ತೇಜಿಸುವುದು.
- ಆಹಾರ, ಪೌಷ್ಟಿಕತೆ, ನಿರ್ಮಲೀಕರಣ, ಕುಟುಂಬ ಯೋಜನೆ, ಆರೋಗ್ಯ, ಇತ್ಯಾದಿಗಳ ವಿಷಯಗಳ ಮೇಲೆ ಜಾಗೃತಾ ಶಿಬಿರಗಳನ್ನು ಏರ್ಪಡಿಸುವುದು.
- ಕೌಶಲ್ಯ ತರಬೇತಿ ಮೂಲಕ ಸ್ವಯಂ ಉದ್ಯೋಗಕ್ಕೆ ಅನುಕೂಲ ಮಾಡಿಕೊಡುವುದು.
- ಉದ್ಯಮಶೀಲ ಅಭಿವೃದ್ಧಿ ಕಾರ್ಯಕ್ರಮದ ಮೂಲಕ ಮಹಿಳೆಯರಲ್ಲಿ ಉದ್ಯಮಶೀಲತೆಯನ್ನು ಉತ್ತೇಜಿಸಿ ಬಲಪಡಿಸಿ ಅಭಿವೃದ್ಧಿಗೊಳಿಸುವುದು.
- ತರಬೇತಿ ಮತ್ತು ಉತ್ಪಾದನಾ ಕೇಂದ್ರಗಳನ್ನು ಸ್ಥಾಪಿಸುವುದು.

**ನಿಗಮದ ಯೋಜನೆಗಳ ವಿವರಗಳು, ಅರ್ಜಿಸುವ ವಿಧಾನ ಇವುಗಳನ್ನು ಈ ಮುಂದೆ ಹೇಳಲಾಗಿದೆ.**

## 1. ತರಬೇತಿ ಕಾರ್ಯಕ್ರಮ:

### ಉದ್ದೇಶ:

ಗ್ರಾಮೀಣ ಮತ್ತು ಪಟ್ಟಣ ಪ್ರದೇಶಗಳಲ್ಲಿ ಕೌಶಲ್ಯ ಸ್ವಯಂ ಉದ್ಯೋಗ ತರಬೇತಿಯನ್ನು ಒದಗಿಸುವುದು ಹಾಗೂ ಸ್ವ ಉದ್ಯೋಗ ಕೈಗೊಳ್ಳಲು ಸಹಕರಿಸುವುದು.

### ಚಟುವಟಿಕೆ:

ಮಹಿಳೆಯು ಸ್ವಯಂ ಉದ್ಯೋಗಿಯಾಗಿ ತನ್ನ ಆರ್ಥಿಕ ಸ್ಥಾನಮಾನ ಹೆಚ್ಚಿಸಿಕೊಳ್ಳಲು ಸಾಧ್ಯವಾಗಬಹುದಾದ ಯಾವುದೇ ಚಟುವಟಿಕೆಗಳಲ್ಲಿ ತರಬೇತಿ ಪಡೆಯಬಹುದು. ಉದಾ: ಹೊಲಿಗೆ, ಉಣ್ಣೆ ಹೆಣಿಗೆ, ಮುದ್ರಣ, ಬುಟ್ಟಿ, ಬೆತ್ತದ ವಸ್ತುಗಳ ತಯಾರಿಕೆ, ಚರ್ಮ ವಸ್ತುಗಳು, ಟಿ.ವಿ., ರೇಡಿಯೋ, ಫೋಟೋಗ್ರಫಿ, ಕಸೂತಿ, ಸ್ಕ್ರೀನ್ ಪ್ರಿಂಟಿಂಗ್, ಬೊಂಬೆ ತಯಾರಿಕೆ, ಬಾಟಿಕ್ ಇತ್ಯಾದಿ. ನಿಗಮದ ತರಬೇತಿ ಕಾರ್ಯಕ್ರಮಗಳು ಸಾಮಾನ್ಯವಾಗಿ ಸ್ಥಳೀಯ ಮಹಿಳಾ ಸಂಸ್ಥೆಗಳ ಮುಖಾಂತರ ಜಾರಿಗೊಳಿಸಲ್ಪಡುತ್ತದೆ.



*ಕೈ ಚಳಕದಿ ಸ್ತ್ರೀ ಸ್ವತಂತ್ರದೆಡೆಗೆ*

ಈ ಯೋಜನೆಯಡಿಯಲ್ಲಿ ಕೆಳಕಂಡ ಸೌಲಭ್ಯಗಳನ್ನು ಒದಗಿಸಲಾಗುತ್ತದೆ.

1. ತರಬೇತಿ ಪಡೆಯುವ ಫಲಾನುಭವಿಗಳಿಗೆ ತಿಂಗಳಿಗೆ ತಲಾ 200 ರೂ.ಗಳ ಶಿಷ್ಯವೇತನ.
2. ತರಬೇತಿ ನೀಡುವ ಶಿಕ್ಷಕರಿಗೆ ಸಂಭಾವನೆ.
3. ತರಬೇತಿ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದ್ದರೆ ಕಟ್ಟಡದ ಬಾಡಿಗೆ (ತಿಂಗಳಿಗೆ ಗರಿಷ್ಠ ರೂ. 1000.00).
4. ತರಬೇತಿ ಅವಧಿಯಲ್ಲಿ ಅವಶ್ಯಕವಿರುವ ಖಚ್ಚಾ ಸಾಮಗ್ರಿಗಳು.

ನಿಗಮವು ಈ ಕೆಳಕಂಡ ಚಟುವಟಿಕೆಗಳನ್ನು ತರಬೇತಿ ಕಾರ್ಯಕ್ರಮಕ್ಕಾಗಿ ಗುರುತಿಸಿದ್ದು ಅನುಕೂಲತಮ ತರಬೇತಿ ಅವಧಿಯನ್ನು ಈ ಮುಂದೆ ನಮೂದಿಸಲಾಗಿದೆ.

| ಚಟುವಟಿಕೆ ಹೆಸರು | ತರಬೇತಿ ಮಂಜೂರು ಮಾಡಲ್ಪಡುವ ಅನುಕೂಲತಮ ಸರಾಸರಿ ಅವಧಿ (ತಿಂಗಳುಗಳಲ್ಲಿ) |
|---|---|
| ರೇಡಿಯೋ, ಟಿ.ವಿ. ರಿಪೇರಿ | 6 |
| ಹೊಲಿಗೆ | 9 |
| ಫೋಟೋಗ್ರಾಫಿ | 3 |
| ಬುಟ್ಟಿ ಹೆಣಿಗೆ | 3 |
| ಸ್ಕ್ರೀನ್ ಪ್ರಿಂಟಿಂಗ್ | 4 |
| ಉಣ್ಣೆ ಹೆಣಿಗೆ | 4 |
| ಕೈ ಕಸೂತಿ ಮತ್ತು ಯಂತ್ರ ಕಸೂತಿ | 6 |
| ಮುದ್ರಣ ಮತ್ತು ಬುಕ್ ಬೈಂಡಿಂಗ್ | 6 |
| ಬುಕ್ ಬೈಂಡಿಂಗ್ | 4 |
| ಬೆತ್ತ ಮತ್ತು ಬಿದಿರು | 6 |
| ನಾರಿನ ವಸ್ತುಗಳು | 6 |
| ಅಗರಬತ್ತಿ | 3 |
| ಯಂತ್ರ ರಿಪೇರಿ | 1 |
| ಚಾಪೆ ಹೆಣಿಗೆ | 2 |
| ಫ್ಯಾಬ್ರಿಕ್ ಪೈಂಟಿಂಗ್ | 6 |
| ಚರ್ಮವಸ್ತುಗಳ ತಯಾರಿಕೆ | 6 |
| ಕೈಮಗ್ಗ ನೇಯ್ಗೆ | 6 |
| ಫ್ಯಾಷನ್ ಡಿಸೈನ್ ಗಾರ್ಮೆಂಟ್ಸ್ | 6 |
| ಗಣಕಯಂತ್ರ ತರಬೇತಿ | 3 |
| ಮೋಟಾರ್ ವೈಂಡಿಂಗ್ | 4 |
| ಬಿದರಿ ವರ್ಕ್ಸ್ | 4 |
| ಬಾಟಿಕ್ ಪೈಂಟಿಂಗ್ | 6 |
| ಚಾಕ್ ರಯಾನ್ | 2 |

ಈ ಮೇಲೆ ಕಾಣಿಸಿರುವ ತರಬೇತಿಗಾಗಿ ಹೆಸರಿಸಿರುವ ಚಟುವಟಿಕೆಗಳು ಉದಾಹರಣಾತ್ಮಕವಾಗಿದ್ದು, ಇವುಗಳಲ್ಲದೆಯೇ ಇತರೆ ಚಟುವಟಿಕೆಗಳಲ್ಲಿಯೂ ಸಹಾ ತರಬೇತಿಯನ್ನು ವ್ಯವಸ್ಥೆಗೊಳಿಸಬಹುದು. ಆದರೆ ತರಬೇತಿಗಾಗಿ ಆಯ್ಕೆ ಮಾಡುವ ಯಾವುದೇ ಚಟುವಟಿಕೆಯು ಮಹಿಳೆಯರಿಗೆ ಸ್ವಯಂ ಉದ್ಯೋಗಕ್ಕೆ ಅನುಕೂಲಕರವಾಗಿರತಕ್ಕದ್ದು.

ಈಗಾಗಲೇ ಸ್ಥಾಪಿತವಾಗಿದ್ದು ಕನಿಷ್ಠ ಎರಡು ವರ್ಷಗಳು ತಮ್ಮ ಸಂಘದ ಚಟುವಟಿಕೆಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಹೋಗಿರುವಂತಹ ಮಹಿಳಾ ಮಂಡಳಿ,ಸಂಘ ಸಂಸ್ಥೆಗಳಿಗೆ ಮಾತ್ರ ತರಬೇತಿ ಕಾರ್ಯಕ್ರಮ ಮಂಜೂರು ಮಾಡಲಾಗುವುದು ಹಾಗೂ ಇಂತಹ ಸಂಸ್ಥೆಗಳು ಮಾತ್ರ ತರಬೇತಿ ಕಾರ್ಯಕ್ರಮಕ್ಕೆ ಪ್ರಸ್ತಾವನೆಗಳನ್ನು ಸಲ್ಲಿಸಲು ಅರ್ಹವಾಗಿರುತ್ತವೆ.

ಮಹಿಳಾ ಮಂಡಳಿಗಳು : ಸಂಸ್ಥೆಗಳು ಈ ಕೆಳಕಂಡ ದಾಖಲಾತಿಗಳ ಸಮೇತ ಪ್ರಸ್ತಾವನೆಗಳನ್ನು ಸಂಬಂಧಪಟ್ಟ ಜಿಲ್ಲೆಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಾಯಕ ನಿರ್ದೇಶಕರ ಅಥವಾ ಜಿಲ್ಲಾ ಕೈಗಾರಿಕಾ ಕೇಂದ್ರದ ಪ್ರಧಾನ ವ್ಯವಸ್ಥಾಪಕರಿಗೆ ಸಲ್ಲಿಸಬೇಕು.

1. ಸಂಸ್ಥೆಯ ನೋಂದಾವಣಿ: ನವೀಕರಣ ಪ್ರಮಾಣ ಪತ್ರ
2. ಸಂಸ್ಥೆಯ ಬೈಲಾ ಪ್ರತಿ
3. ಆಡಳಿತ ಮಂಡಲಿ ಸದಸ್ಯರ ಪಟ್ಟಿ (ಬಹುಪಾಲು ಸದಸ್ಯರು ಮಹಿಳೆಯರಿರಬೇಕು)
4. ಸಂಸ್ಥೆಯ ಆಡಳಿತ ಮಂಡಳಿಯಲ್ಲಿ ನಿಗಮದಿಂದ ಉದ್ದೇಶಿತ ಕಾರ್ಯಕ್ರಮವನ್ನು ಪಡೆದುಕೊಳ್ಳಲು ಮಾಡಿರುವ ಠರಾವು ನಕಲು.
5. ಫಲಾನುಭವಿಗಳ ಪಟ್ಟಿ, ಫಲಾನುಭವಿಗಳ ಅಂಚೆ ವಿಳಾಸ,



*ಕರ್ಮಣಿಯ ತರಬೇತಿ*
*ಮಹಿಳೆಯ ಆರ್ಥಿಕ*
*ಸ್ಥಾನ-ಮಾನ*
*ಅಧಿಕಗೊಳ್ಳುವ ಹಾದಿ*

ವಿದ್ಯಾರ್ಹತೆ, ವಯಸ್ಸು, ಆದಾಯ, ಜಾತಿ; ವಿವರಗಳನ್ನು ಒದಗಿಸಬೇಕು ಮತ್ತು ಪಟ್ಟಿಯು ಸಂಸ್ಥೆಯ ಅಧ್ಯಕ್ಷರು/ ಕಾರ್ಯದರ್ಶಿಗಳಿಂದ ದೃಢೀಕರಣವಾಗಿರಬೇಕು.

6. ತರಬೇತಿ ಪಡೆಯುವಂತಹ ತಂಡವು ಹತ್ತರಿಂದ ಇಪ್ಪತ್ತರ ಸಂಖ್ಯೆ ಹೊಂದಿರಬಹುದು.
7. ತರಬೇತಿ ನಡೆಸಲು ಸಂಸ್ಥೆಯಲ್ಲಿ ಲಭ್ಯವಿರುವ ಉಪಕರಣಗಳ ಹಾಗೂ ಸ್ಥಳಾವಕಾಶದ ಬಗ್ಗೆ ಟಿಪ್ಪಣಿ.
8. ಉದ್ದೇಶಿತ ತರಬೇತಿಯನ್ನು ಕಲಿಸಲು ಲಭ್ಯವಿರುವ ಶಿಕ್ಷಕರ ಹೆಸರು ಮತ್ತು ವಿವರಗಳು.
9. ತಕ್ಷಣದ ಹಿಂದಿನ ಮೂರು ವರ್ಷಗಳ ಆಡಿಟ್ ವರದಿಗಳು.
10. ಈ ಹಿಂದೆ ನಿಗಮದಿಂದ ತರಬೇತಿ ಕಾರ್ಯಕ್ರಮವನ್ನೇನಾದರೂ ಪಡೆದಿದ್ದಲ್ಲಿ ಆ ಕಾರ್ಯಕ್ರಮದ ಖರ್ಚು ವೆಚ್ಚದ ಪಟ್ಟಿಯನ್ನು ಸಲ್ಲಿಸಲಾಗಿದೆಯೇ? ಹಾಗೂ ತರಬೇತಿ ಹೊಂದಿದ ಫಲಾನುಭವಿಗಳು ಯಾವ ಪ್ರಕಾರದಲ್ಲಿ ಸ್ವಯಂ ಉದ್ಯೋಗದಲ್ಲಿ ತೊಡಗಿದ್ದಾರೆ ಎಂಬ ಬಗ್ಗೆ ಟಿಪ್ಪಣಿ.

ಈ ಮೇಲಿನ ಮಾಹಿತಿಗಳನ್ನು ಒಳಗೊಂಡ ಪ್ರಸ್ತಾವನೆಗಳನ್ನು ಸ್ವೀಕರಿಸಿದ ನಂತರ ಜಿಲ್ಲಾ ಕೈಗಾರಿಕಾ ಕೇಂದ್ರದ ಪ್ರಧಾನ ವ್ಯವಸ್ಥಾಪಕರು ಅಥವಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಾಯಕ ನಿರ್ದೇಶಕರು ಅಥವಾ ಅವರ ಅಧೀನ ಅಧಿಕಾರಿಗಳು ಸದರಿ ಸಂಸ್ಥೆಯನ್ನು ತಪಾಸಣೆ ಮಾಡಿ ಉದ್ದೇಶಿತ ತರಬೇತಿಯನ್ನು ಮಂಜೂರು ಮಾಡುವ ಬಗ್ಗೆ ನಿಖರವಾದ ಅಭಿಪ್ರಾಯವನ್ನು ತಿಳಿಸಿ ಪ್ರಸ್ತಾವನೆಯನ್ನು ಜಿಲ್ಲೆಯಿಂದ ಮಹಿಳಾ ಅಭಿವೃದ್ಧಿ ನಿಗಮಕ್ಕೆ ಸಲ್ಲಿಸಬೇಕು.

ಮಹಿಳಾ ಅಭಿವೃದ್ಧಿ ನಿಗಮದಿಂದ ತರಬೇತಿ ಮಂಜೂರಾದ ನಂತರ ಮಂಜೂರಾತಿ ಆದೇಶವನ್ನು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಹಾಗೂ ಸಂಬಂಧಪಟ್ಟ ಮಹಿಳಾ ಮಂಡಳಿ/ಸಂಸ್ಥೆಗೆ ಕಳುಹಿಸಿ ಕೊಡಲಾಗುವುದು. ಮಂಜೂರಾತಿ ಆದೇಶ ಸ್ವೀಕರಿಸಿದ ತಕ್ಷಣ ಮಹಿಳಾ ಮಂಡಲ / ಸಂಸ್ಥೆಯವರು ಈ ಕೆಳಕಂಡ ನಮೂನೆಯಲ್ಲಿ ಫಲಾನುಭವಿಗಳ ಭಾವ ಚಿತ್ರವನ್ನು ಲಗತ್ತಿಸಿ ನಿಗಮಕ್ಕೆ ದೃಢೀಕರಿಸಿ ಸಲ್ಲಿಸಬೇಕು.

**ನಮೂನೆ**

**ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ**
**ನಿಯಮಿತ, ಬೆಂಗಳೂರು**

ಘೋಷಣೆ
ಹಾಗೂ
ಭಾವಚಿತ್ರ

[ಭಾವಚಿತ್ರ]

1. ಅಭ್ಯರ್ಥಿಯ ಹೆಸರು ಮತ್ತು ಪೂರ್ಣ ಅಂಚೆ ವಿಳಾಸ:
2. ಜಾತಿ
3. ವಯಸ್ಸು
4. ವಾರ್ಷಿಕ ವರಮಾನ

ಈ ಕೆಳಗೆ ಸಹಿ ಮಾಡಿರುವ ನಾನು ತಿಳಿಸುವುದೇನೆಂದರೆ ನಾನು ಯಾವುದೇ ತರಬೇತಿ ಕಾರ್ಯಕ್ರಮವನ್ನು ಸರ್ಕಾರದ ವತಿಯಿಂದಾಗಲೀ ಅಥವಾ ಖಾಸಗೀ ಸಂಸ್ಥೆಯಿಂದಾಗಲೀ ಪಡೆದಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಅಭ್ಯರ್ಥಿಯ ಸಹಿ

ಭಾವ ಚಿತ್ರಗಳನ್ನೊಳಗೊಂಡ ನಮೂನೆಯ ಪ್ರಮಾಣ ಪತ್ರಗಳನ್ನು ನಿಗಮದಲ್ಲಿ ಸ್ವೀಕೃತವಾದ ನಂತರ ತರಬೇತಿಯ ಮೊದಲನೆ ಕಂತಿನ ಹಣವನ್ನು ಬಿಡುಗಡೆ ಮಾಡಲಾಗುವುದು.

ತರಬೇತಿ ಕಾರ್ಯಕ್ರಮ ಪೂರ್ಣಗೊಂಡ ನಂತರ ತರಬೇತಿಯನ್ನು ಪಡೆದಂತಹ ಫಲಾನುಭವಿಗಳಿಗೆ ತಮ್ಮ ತರಬೇತಿಗೆ ಅನುಗುಣವಾಗಿ ಉಪಕರಣಗಳನ್ನು ಒದಗಿಸಲಾಗುವುದು. ಒಬ್ಬರಿಗೆ ರೂ. 1000-00ಗಳವರೆವಿಗೆ ನೀಡುವಂತಹ ಉಪಕರಣಗಳು ಸಹಾಯಧನದ ರೂಪದಲ್ಲಿ ದೊರಕಲಿದ್ದು ರೂ. 1000-00 ಗಳಿಗಿಂತ ಹೆಚ್ಚು ವೆಚ್ಚವಾಗುವ ಉಪಕರಣಗಳ ವೆಚ್ಚವನ್ನು ಶೇ. 10ರ ಬಡ್ಡಿಯಲ್ಲಿ ಸುಲಭ ಕಂತುಗಳಲ್ಲಿ ವಸೂಲಿ ಮಾಡಲಾಗುವುದು.

ಸಂಬಂಧಪಟ್ಟ ಸಾಲಿಗೆ ನಿಗದಿಪಡಿಸಿದ ಗುರಿ ಪ್ರಕಾರ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುವುದು.

## ಸಂಪರ್ಕ ಕಛೇರಿ:

1. ಸಂಬಂಧಪಟ್ಟ ಜಿಲ್ಲೆಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಹಾಯಕ ನಿರ್ದೇಶಕರು.
2. ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ಕೈಗಾರಿಕಾ ಕೇಂದ್ರ ಪ್ರಧಾನ ವ್ಯವಸ್ಥಾಪಕರು.



ಸ್ತ್ರೀ ಸ್ವಾವಲಂಬನೆಗೆ
ಕಾರ್ಯಾಣ ವೇದಿಕೆ

3. ಬೆಂಗಳೂರು ನಗರದ ವ್ಯಾಪ್ತಿಯಲ್ಲಿನ ಸಂಸ್ಥೆಗಳು ನೇರವಾಗಿ ಮಹಿಳಾ ಅಭಿವೃದ್ಧಿ ನಿಗಮದ ಪ್ರಧಾನ ಕಛೇರಿಯನ್ನು ಸಂಪರ್ಕಿಸುವುದು.

## 2. ತರಬೇತಿ ಮತ್ತು ಉತ್ಪಾದನಾ ಕೇಂದ್ರಗಳು:

ಮಹಿಳಾ ಸಂಘಗಳ ಸಂಸ್ಥೆಗಳ ಆದಾಯ ಉತ್ಪನ್ನಕರ ಚಟುವಟಿಕೆಗಳನ್ನು ಪ್ರೋತ್ಸಾಹಿಸಲು ಹಾಗೂ ಸ್ವಯಂ ಉದ್ಯೋಗ ತರಬೇತಿ ಪಡೆದ ಮಹಿಳೆಯರಿಗೆ ಉದ್ಯೋಗ ಒದಗಿಸಲು ನಿಗಮವು ಗರಿಷ್ಠ 1 ಲಕ್ಷದವರೆಗೆ ಶೇ.10ರಷ್ಟು ಬಡ್ಡಿ ದರದಲ್ಲಿ ಸಂಘ ಸಂಸ್ಥೆಗಳಿಗೆ ಸಾಲ ಸೌಲಭ್ಯ ನೀಡುತ್ತಲಿದೆ, ಈ ಯೋಜನೆಯಡಿಯಲ್ಲಿ ಪಡೆದ ಸಾಲವನ್ನು ಗರಿಷ್ಠ 50 ಮಾಸಿಕ ಕಂತುಗಳಲ್ಲಿ ಹಿಂತಿರುಗಿಸಬೇಕಾಗುತ್ತದೆ. ಯೋಜನಾ ವೆಚ್ಚದ ಶೇ. 20ರಷ್ಟು ವೆಚ್ಚವನ್ನು ಭರಿಸುವ ಸಾಮರ್ಥ್ಯ ವನ್ನು ಸಂಸ್ಥೆಯು ಹೊಂದಿರಬೇಕಾಗುತ್ತದೆ.

ನೋಂದಾಯಿತ ಸ್ವಯಂ ಸೇವಾ ಸಂಘಗಳು, ಸಹಕಾರಿ ಸಂಸ್ಥೆಗಳು ಅಥವಾ ಇತರೆ ಮಹಿಳಾ ಸಂಸ್ಥೆಗಳು ಕನಿಷ್ಠ 2 ವರ್ಷಗಳು ತಮ್ಮ ಚಟುವಟಿಕೆಗಳನ್ನು ನಡೆಸಿದ್ದಲ್ಲಿ ಈ ಯೋಜನೆಯಡಿ ಸಹಾಯ ಪಡೆಯಲು ಅರ್ಹವಾಗಿರುತ್ತದೆ. ತಾಂತ್ರಿಕ ಸಾಮರ್ಥ್ಯ, ಅವಶ್ಯಕತೆ, ಉತ್ಪಾದನೆ ಸಾಮರ್ಥ್ಯ, ಖಚ್ಚಾ ಪದಾರ್ಥಗಳ ಸರಬರಾಜು, ಮಾರಾಟ ವ್ಯವಸ್ಥೆ ಇವುಗಳ ಆಧಾರದ ಮೇಲೆ ಪ್ರಸ್ತಾವನೆಗಳನ್ನು ಪರಿಶೀಲಿಸಿ ಪರಿಗಣಿಸಲಾಗುವುದು.

ಸಾಲ ಮಂಜೂರಾದ ನಂತರ ಮಂಜೂರಾತಿ ಪಡೆದ ಸಂಸ್ಥೆಯು ನಿಗಮದೊಡನೆ ನಿಗಧಿತ ನಮೂನೆಯಲ್ಲಿ ಛಾಪಾ ಕಾಗದದಲ್ಲಿ ಕರಾರು ಮಾಡಿಕೊಳ್ಳಬೇಕಾಗಿರುತ್ತದೆ. ಉತ್ಪಾದನಾ ಚಟುವಟಿಕೆಗೆ ಬೇಕಾಗುವಂತಹ ಉಪಕರಣಗಳನ್ನು ಮೊದಲ ಕಂತಿನ ಹಣದಲ್ಲಿಯೇ ಖರೀದಿಸಬೇಕಾಗಿರುತ್ತದೆ. ಸಂಸ್ಥೆಯು ಉಪಕರಣಗಳ ಬಗ್ಗೆ ಸಲ್ಲಿಸಿರುವ ಬೆಲೆ ಪಟ್ಟಿಗೆ ಅನುಗುಣವಾಗಿ ಇನ್‌ವಾಯ್ಸ್ ನೀಡಿರುವ ಸಂಸ್ಥೆಗೆ ನೇರವಾಗಿ ಉಪಕರಣಗಳ ವೆಚ್ಚವನ್ನು ಬಿಡುಗಡೆ ಮಾಡಲಾಗುವುದು. ಮೊದಲನೆ ಕಂತಿನ ವಿನಿಯೋಗದ ನಂತರ ಅಂದರೆ ಉಪಕರಣಗಳು ಮತ್ತು ಇತರೆ ಉಳಿಕೆ ವೆಚ್ಚದ ಬಗ್ಗೆ ಪ್ರಮಾಣ ಪತ್ರ ಒದಗಿಸಿದ ನಂತರ ಮಹಿಳಾ ಅಭಿವೃದ್ಧಿ ನಿಗಮದ ಅಧಿಕಾರಿಗಳು ಸಾಲ ಪಡೆದ ಸಂಸ್ಥೆಯು ಉತ್ಪಾದನೆ ನಡೆಸಲು ಉದ್ದೇಶಿಸಿರುವ ಆವರಣವನ್ನು ತಪಾಸಣೆ ಮಾಡಿ ಉಪಕರಣಗಳನ್ನು ಅಳವಡಿಸಿ ಉತ್ಪಾದನೆಗೆ ಎಲ್ಲಾ ರೀತಿಯ ವ್ಯವಸ್ಥೆಗಳನ್ನು ಸಜ್ಜುಗೊಳಿಸಿಕೊಂಡಿರುವರೆಂಬ ಅಂಶ ವನ್ನು ಪರಿಶೀಲಿಸಿ ಎರಡನೇ ಕಂತಿನ ಹಣದ ಬಿಡುಗಡೆಗೆ ಕ್ರಮ ಕೈಗೊಳ್ಳುವರು.

ಈಗಾಗಲೇ ತರಬೇತಿ ಪಡೆದಿರುವ ಬಡತನದ ರೇಖೆಗಿಂತ ಕೆಳಮಟ್ಟದ ಕುಟುಂಬದಿಂದ ಬಂದಂತಹ 5-10 ಮಹಿಳೆಯರನ್ನು ಸಂಘಟಿಸಿ ಉತ್ಪಾದನಾ ಕೇಂದ್ರಗಳನ್ನು ಸ್ಥಾಪಿಸಬಹುದು. ಸಂಘಟಿಸಲಾದ ಮಹಿಳೆಯರಿಗೆ ತರಬೇತಿ ಅವಶ್ಯಕವಿದ್ದಲ್ಲಿ ಇದೇ ಯೋಜನೆಯಡಿಯಲ್ಲಿ ಅಲ್ಪಾವಧಿ ತರಬೇತಿಯನ್ನು ವ್ಯವಸ್ಥೆಗೊಳಿಸಬೇಕಾಗಿರುತ್ತದೆ.


ತರಬೇತಿ ಮತ್ತು ಉತ್ಪಾದನಾ ಕೇಂದ್ರದ ಯೋಜನೆಯಡಿಯಲ್ಲಿ ಪಡೆಯುವಂತಹ ಪ್ರಯೋಜನವು ಪೂರ್ಣವಾಗಿ ಸಾಲವಾಗಿದ್ದು ಯಾವುದೇ ರೀತಿಯ ಸಹಾಯಧನ ಇದರಲ್ಲಿ ಸೇರಿರುವುದಿಲ್ಲ.

### ಉತ್ಪಾದನಾ ಘಟಕ ಸ್ಥಾಪಿಸಬಹುದಾದ ಚಟುವಟಿಕೆಗಳು

ಮಹಿಳೆಯರ ಆರ್ಥಿಕ ಮಟ್ಟವನ್ನು ಹೆಚ್ಚಿನ ಆದಾಯದ ಮೂಲಕ ಸುಧಾರಿಸುವ ಯಾವುದೇ ಯೋಜನೆ ಉದಾ: ಹೊಲಿಗೆ, ಚಾಪೆ ಮತ್ತು ಬುಟ್ಟಿ ಹೆಣೆಯುವುದು, ಮಣ್ಣಿನ ಪದಾರ್ಥಗಳು, ಕಡಿಮೆ ವೆಚ್ಚದ ಕಟ್ಟಡದ ಸಾಮಗ್ರಿಗಳ ತಯಾರಿಕೆ, ಸ್ಕ್ರೀನ್ ಪ್ರಿಂಟಿಂಗ್, ಭಾಗಶಃ ಯಂತ್ರದ ಬೇಕರಿ, ಚರ್ಮ ಮತ್ತು ರೆಗ್ಸಿನ್ ಪದಾರ್ಥಗಳ ತಯಾರಿಕೆ ಸೇವೆಗಳು, ರೇಷ್ಮೆ ನೂಲು ತೆಗೆಯುವುದು, ರೇಷ್ಮೆ ನೇಯ್ಗೆ, ಹತ್ತಿ ನೇಯ್ಗೆ ಅಥವಾ ಇತರೆ ಯಾವುದೇ ಮಾರಾಟ ಸಾಮರ್ಥ್ಯ ಇದೆಯೆಂದು ಗುರುತಿಸಲಾದ ಯೋಜನೆಗಳು.

ಯೋಜನೆಯ ಸಂಕ್ಷಿಪ್ತ ವಿವರಗಳನ್ನು ಈ ಕೆಳಗೆ ಕೊಡಲಾಗಿದೆ.

ಸಾಲ: ಒಪ್ಪಲ್ಪಟ್ಟ ಯೋಜನಾ ವೆಚ್ಚದ ಶೇ. 80ರಷ್ಟು (ತರಬೇತಿ ವೆಚ್ಚವನ್ನು ಹೊರತು ಪಡಿಸಿ) ಸಾಲವಾಗಿ ನೀಡಲಾಗುವುದು.
ಸಂಸ್ಥೆಯ ಸ್ವಂತ ಬಂಡವಾಳ: ಶೇ.20ರಷ್ಟು ಯೋಜನಾ ವೆಚ್ಚದ ಮೊತ್ತ (ತರಬೇತಿ ವೆಚ್ಚವನ್ನು ಹೊರತು ಪಡಿಸಿ) ತರಬೇತಿ ವೆಚ್ಚದ ಶೇ. 50ರಷ್ಟು (ರೂ. 5000ಗಳಿಗೆ ಮೀರಿದ ಸಂದರ್ಭಗಳಲ್ಲಿ) ಅನುದಾನವಾಗಿ ನೀಡಲಾಗುವುದು.



ಹೆಣೆಯುವೆವು ನಾವು
ಉಜ್ವಲ ಭವಿಷ್ಯವ

ತರಬೇತಿ ಅವಧಿ: ಗರಿಷ್ಠ 6 ತಿಂಗಳು.

ಬಡ್ಡಿ ದರ: ಒಟ್ಟಾರೆ ಸಾಲದ ಅಂಶದ ಮೇಲೆ ಶೇ. 10ರಷ್ಟು. ಒಂದು ವೇಳೆ ಸರಿಯಾಗಿ ಮರುಪಾವತಿ ಮಾಡದಿದ್ದ ಸಂದರ್ಭದಲ್ಲಿ ಹೆಚ್ಚಿಗೆ ಶೇ. 1 ರಷ್ಟು ಸುಸ್ತಿ ಬಡ್ಡಿ ವಿಧಿಸಲಾಗುವುದು.

ಮರುಪಾವತಿ ಅವಧಿ:

ಅ. ಸಾಲ ವಸೂಲಾತಿಯನ್ನು ಸಾಲ ವಿತರಿಸಿದ 6 ತಿಂಗಳ ನಂತರ ಪ್ರಾರಂಭಿಸಲಾಗುತ್ತದೆ.

ಆ. 30 – 50 ರೊಳಗೆ ಮಾಸಿಕ ಕಂತುಗಳಲ್ಲಿ ಮರು ಪಾವತಿ ಮಾಡಬೇಕು.

**ತರಬೇತಿ ಮತ್ತು ಉತ್ಪಾದನಾ ಯೋಜನೆಯಡಿಯಲ್ಲಿ ಸಾಲ ಪಡೆಯಲು ಅರ್ಜಿ ನಮೂನೆ ಈ ಕೆಳಕಂಡಂತಿದೆ.**

1. ಸಂಸ್ಥೆಯ ಹೆಸರು ಮತ್ತು ವಿಳಾಸ :

2. ನೋಂದಣಿ ಸಂಖ್ಯೆ ಮತ್ತು ದಿನಾಂಕ (ನೋಂದಣಿ : ನವೀಕರಣ ಪ್ರಮಾಣ ಪತ್ರಗಳ ಬೈಲಾ ಪ್ರತಿ ಮತ್ತು ನಿರ್ದೇಶಕರ ಮಂಡಳಿಯ ಸದಸ್ಯರ ಮಾಹಿತಿಯನ್ನೊದಗಿಸುವುದು) :

ಅ. ವ್ಯವಹರಿಸಲು ನೇಮಿಸಿದ ವ್ಯಕ್ತಿಯ ಹೆಸರು (ನಿರ್ದೇಶಕರ ಮಂಡಲಿಯ ಕರಾರಿನ ಪ್ರತಿ) :

ಆ. ಬ್ಯಾಂಕಿನೊಡನೆ ವ್ಯವಹರಿಸಲು ನೇಮಿಸಲಾದ ವ್ಯಕ್ತಿಯ ಹೆಸರು, ಬ್ಯಾಂಕಿನ ಹೆಸರು ಮತ್ತು ಇತ್ಯಾದಿ ವಿವರಗಳು. :

3. ಉತ್ಪಾದನೆ ಮಾಡಲು ಉದ್ದೇಶಿಸಿರುವ ವಸ್ತು ಮತ್ತು ಮಾರುಕಟ್ಟೆ ಸೌಲಭ್ಯ. :

4. ಮಾರುಕಟ್ಟೆ ಸಮೀಕ್ಷೆ ವರದಿ (ವರದಿ ಲಗತ್ತಿಸಿ) :

5. ಮಾರುಕಟ್ಟೆ ಭರವಸೆ (ಪ್ರಮಾಣಪತ್ರ:ಪತ್ರ ಲಗತ್ತಿಸಿ) :

6. ಫಲಾನುಭವಿಗಳ ಸಂಖ್ಯೆ ಮತ್ತು ವಿವರಗಳು :

7. ಫಲಾನುಭವಿಗಳ ವಿದ್ಯಾರ್ಹತೆ (ತಾಂತ್ರಿಕ ವಿದ್ಯಾರ್ಹತೆ ನಿಗಧಿಪಡಿಸಿದ್ದಲ್ಲಿ ತಿಳಿಸಬೇಕು) :

8. ಯೋಜನೆಯ ವಿವರ (ವಿವರವಾದ ಯೋಜನಾ ವರದಿ ಲಗತ್ತಿಸುವುದು) :

9. ಸಂಸ್ಥೆಯು ಶೇ. 20ರಷ್ಟು ಯೋಜನಾ ವೆಚ್ಚ ಭರಿಸಲು ತಯಾರಿದೆಯೇ ಹಾಗಿದ್ದಲ್ಲಿ ಹಣವನ್ನು ಭರಿಸುವ ಮೂಲ ಮತ್ತು ಸಂಸ್ಥೆಯ ಹಣಕಾಸಿನ ಸ್ಥಿತಿಯ ಬಗ್ಗೆ ವಿವರವಾದ ಮಾಹಿತಿ ನೀಡುವುದು. (ತಕ್ಷಣದ ಹಿಂದಿನ ಎರಡು ವರ್ಷಗಳ ಆಡಿಟ್ ವರದಿಗಳನ್ನು ಲಗತ್ತಿಸುವುದು) :

10. ಅನುಭವದ ಬಗ್ಗೆ ಮಾಹಿತಿ :

11. ತರಬೇತಿಯ ಆವಶ್ಯಕತೆ ಇದೆಯೇ ಅವಶ್ಯಕತೆ ಇದ್ದಲ್ಲಿ ಈ ಬಗ್ಗೆ ವಿವರವಾದ ಮಾಹಿತಿ ಮತ್ತು ಒಟ್ಟು ವೆಚ್ಚದ ಬಗ್ಗೆ ಮಾಹಿತಿ :

12. ತರಬೇತಿ ಕಾರ್ಯಕ್ರಮವನ್ನು ಪ್ರಾರಂಭಿಸುವ ಅಂದಾಜು ದಿನಾಂಕ ಮತ್ತು ಉತ್ಪಾದನಾ ಘಟಕ ಪ್ರಾರಂಭಿಸುವ ಅಂದಾಜು ದಿನಾಂಕ :

13. ಇತರ ಮಾಹಿತಿಯನ್ನು ತಿಳಿಸಬೇಕಿದ್ದರೆ :


ಸಹಿ ಮತ್ತು ಸೀಲ್

**ಸಂಪರ್ಕ ಕಛೇರಿ:**

1. ಸಂಬಂಧಪಟ್ಟ ಜಿಲ್ಲೆಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಹಾಯಕ ನಿರ್ದೇಶಕರು.
2. ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ಕೈಗಾರಿಕಾ ಕೇಂದ್ರ ಪ್ರಧಾನ ವ್ಯವಸ್ಥಾಪಕರು.
3. ಬೆಂಗಳೂರು ನಗರದ ವ್ಯಾಪ್ತಿಯಲ್ಲಿನ ಸಂಸ್ಥೆಗಳು ನೇರವಾಗಿ ಮಹಿಳಾ ಅಭಿವೃದ್ಧಿ ನಿಗಮದ ಪ್ರಧಾನ ಕಛೇರಿಯನ್ನು ಸಂಪರ್ಕಿಸುವುದು.

## 3. ಮನೆ ಬೆಳಕು:

ಬಡ ಮಹಿಳೆಯರು ಸಣ್ಣ ಪ್ರಮಾಣದ ವ್ಯಾಪಾರ, ಕೈಗಾರಿಕೆ, ಕೈಮಗ್ಗ ನೇಯ್ಗೆ, ಕರಕುಶಲ ವಸ್ತುಗಳ ತಯಾರಿಕೆ ಇತ್ಯಾದಿ ಪ್ರಾರಂಭಿಸಲು ಪ್ರೋತ್ಸಾಹಿಸಲು ಹಾಗೂ ತಮ್ಮ ಆದಾಯವನ್ನು ಹೆಚ್ಚಿಸಿಕೊಂಡು ಆರ್ಥಿಕವಾಗಿ ಮುಂದುವರೆಯಲು ಗರಿಷ್ಠ 10000 ರೂ.ಗಳವರೆಗೆ ಸಾಲವನ್ನು ವಾಣಿಜ್ಯ ಬ್ಯಾಂಕುಗಳು ಹಾಗೂ ಇತರೆ ಹಣಕಾಸು ಸಂಸ್ಥೆಗಳ ಮುಖಾಂತರ ಒದಗಿಸಲಾಗುವುದು. ಈ ಯೋಜನೆ ಅಡಿಯಲ್ಲಿ ಸಾಲ ಪಡೆಯಲು ಪಟ್ಟಣ ಪ್ರದೇಶದಲ್ಲಿ ವಾರ್ಷಿಕ



*ಸ್ವಾವಲಂಬನೆಯಲ್ಲಿ ಹಾಲುಂಡ ಸಂತಸ*

ರೂ. 12000 ಅಥವಾ ಅದಕ್ಕಿಂತ ಕಡಿಮೆ ಆದಾಯ ಇರುವ ಕುಟುಂಬದ ಅರ್ಜಿದಾರರು ಮತ್ತು ಗ್ರಾಮಾಂತರ ಪ್ರದೇಶದಲ್ಲಿ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯಡಿಯಲ್ಲಿ ಸಾಲ ಪಡೆಯಲು ಅರ್ಹತೆ ಹೊಂದಿರುವ ಆದಾಯ ಮಿತಿಗೊಳಪಟ್ಟ ಅರ್ಜಿದಾರರು ಅರ್ಹರಾಗಿರುತ್ತಾರೆ. ಸಾಲದ ಶೇ.25ರಷ್ಟನ್ನು ಸಹಾಯಧನದ ರೂಪದಲ್ಲಿ ನೀಡಲಾಗುವುದು. ಭರ್ತಿ ಮಾಡಿದ ಅರ್ಜಿಗಳನ್ನು ಸಂಬಂಧಪಟ್ಟ ದಾಖಲೆಗಳೊಡನೆ ಆಯಾ ಜಿಲ್ಲೆಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಾಯಕ ನಿರ್ದೇಶಕರುಗಳಿಗೆ ಸಲ್ಲಿಸಬೇಕು.

ಈ ಯೋಜನೆಯನ್ನು ಈ ಹಿಂದೆ ಗೃಹ ಕಲ್ಯಾಣ ಎಂಬ ಹೆಸರಿನಿಂದ ಕರೆಯಲಾಗುತ್ತಿತ್ತು. ಗೃಹ ಕಲ್ಯಾಣ ಯೋಜನೆಯಲ್ಲಿ ಕೇವಲ 5000 ರೂ.ಗಳವರೆವಿಗೆ ಮಾತ್ರ ಸಾಲ ಪಡೆಯುವಂತಹ ಅವಕಾಶವಿದ್ದು, ಮನೆ ಬೆಳಕು ಯೋಜನೆಯಡಿಯಲ್ಲಿ ರೂ. 10000 ಗಳವರೆವಿಗೆ ಸಾಲ ಪಡೆಯುವಂತಹ ಅರ್ಹತೆ ಇರುತ್ತದೆ. ಇಷ್ಟೇ ಅಲ್ಲದೇ ಗೃಹ ಕಲ್ಯಾಣ ಯೋಜನೆಯು ಕೇವಲ ಪಟ್ಟಣ ಪ್ರದೇಶಗಳಲ್ಲಿ ಮಾತ್ರ ಜಾರಿಗೊಳಿಸಲಾಗುತ್ತಿದ್ದು, ಮನೆ ಬೆಳಕು ಯೋಜನೆಯು ಪಟ್ಟಣ ಹಾಗೂ ಗ್ರಾಮಾಂತರ ಪ್ರದೇಶಗಳೆರಡರಲ್ಲಿಯೂ ಜಾರಿಗೊಳಿಸಬಹುದಾಗಿರುತ್ತದೆ. ಗೃಹ ಕಲ್ಯಾಣ ಯೋಜನೆಯಡಿ ಅರ್ಜಿದಾರರ ಕುಟುಂಬದ ಆದಾಯವು 4,500 ರೂ.ಗಳಿಗಿಂತ ಕಡಿಮೆ ಇರಬೇಕಾಗಿದ್ದು, ಮನೆ ಬೆಳಕು ಯೋಜನೆಯಡಿ ಈ ಆದಾಯ ಮಿತಿಯನ್ನು ಪಟ್ಟಣ ಪ್ರದೇಶಗಳಲ್ಲಿ ರೂ. 12,000ಗಳವರೆವಿಗೂ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯಡಿಯಲ್ಲಿ ಸಾಲ ಪಡೆಯಲು ಅರ್ಹತೆ ಹೊಂದಿರುವ ಆದಾಯ ಮಿತಿಗೆ ಹೆಚ್ಚಿಸಲಾಗಿದೆ.

ಮನೆ ಬೆಳಕು ಯೋಜನೆಯ ಅರ್ಜಿ ನಮೂನೆಯು ಸಂಬಂಧಪಟ್ಟ ಜಿಲ್ಲಾ ಸಹಾಯಕ ನಿರ್ದೇಶಕರು ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರಲ್ಲಿ ಲಭ್ಯವಿರುತ್ತದೆ.

ಸಂಬಂಧಪಟ್ಟ ಸಾಲಿಗೆ ನಿಗಧಿ ಪಡಿಸಿರುವ ಗುರಿಗೆ ಅನುಗುಣವಾಗಿ ಸಹಾಯಕ ನಿರ್ದೇಶಕರು ಈ ಕಾರ್ಯಕ್ರಮವನ್ನು ತಮ್ಮ ತಮ್ಮ ಜಿಲ್ಲೆಗಳಲ್ಲಿ ಕಾರ್ಯಗತಗೊಳಿಸುವರು.

**ಸಂಪರ್ಕ ಕಛೇರಿ:**

1. ಸಂಬಂಧಪಟ್ಟ ಜಿಲ್ಲೆಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಹಾಯಕ ನಿರ್ದೇಶಕರು.

**ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು.**

ಕೇಂದ್ರ ಕಛೇರಿ: 16ನೇ ಮಹಡಿ, ಜನೋಪಯೋಗಿ ಕಟ್ಟಡ,
ಮಹಾತ್ಮಾಗಾಂಧಿ ರಸ್ತೆ, ಬೆಂಗಳೂರು-560 001.

---

ಆದಾಯ ಉತ್ಪನ್ನಕರ ''ಮನೆಬೆಳಕು'' ಯೋಜನೆಯಡಿಯಲ್ಲಿ ಸಾಲ / ಸಹಾಯಧನ ಪಡೆಯಲು ಅರ್ಜಿ ನಮೂನೆ.

---

1. ಎ) ಅರ್ಜಿದಾರರ ಹೆಸರು (ದಪ್ಪ ಅಕ್ಷರಗಳಲ್ಲಿ) :
   ಬಿ) ತಂದೆಯ / ಪತಿಯ ಹೆಸರು :
   ಸಿ) ಈಗಿನ ವಿಳಾಸ :
   ಡಿ) ಹಿಂದಿನ ಹತ್ತು ವರ್ಷಗಳ ಅವಧಿಯಲ್ಲಿನ ವಿಳಾಸಗಳು (ಇದ್ದಲ್ಲಿ ಮಾತ್ರ) :
2. ವಯಸ್ಸು, ದಿನಾಂಕ ಹಾಗೂ ಹುಟ್ಟಿದ ಸ್ಥಳ :
3. ವಿದ್ಯಾರ್ಹತೆಗಳು:-
   ಎ) ಶೈಕ್ಷಣಿಕ :
   ಬಿ) ತಾಂತ್ರಿಕ / ವಾಣಿಜ್ಯ :
   ಸಿ) ಯಾವುದಾದರೂ ವೃತ್ತಿ ಅಥವಾ ಕಸುಬಿನಲ್ಲಿ ವಾಸ್ತವಿಕ ಅನುಭವ :
4. ಆರ್ಥಿಕ ಸಹಾಯ :
   ಎ) ಆರ್ಥಿಕ ಸಹಾಯ ಯಾವ ಉದ್ದೇಶಕ್ಕೆ ಅಗತ್ಯವಿದೆ? (ವಿವರವಾದ ಯೋಜನೆಯ ಪ್ರತಿ ಲಗತ್ತಿಸಿ) :
   ಬಿ) ಬೇಕಾಗಿರುವ ಆರ್ಥಿಕ ಸಹಾಯದ ಸ್ವಭಾವ ಹಾಗೂ ಪ್ರಮಾಣ :
   ಸಿ) ಮಹಿಳಾ ಅಭಿವೃದ್ಧಿ ನಿಗಮದ ಸಹಾಯವಿಲ್ಲದೇ ವ್ಯಾಪಾರ / ಉದ್ದಿಮೆಯನ್ನು ನಡೆಸಲಾಗುವುದಿಲ್ಲ. ಎಂಬುದಕ್ಕೆ ಕಾರಣಗಳು :
   ಡಿ) ಬೇರೆ ಯಾವುದಾದರೂ ಹಣಕಾಸು/ಸಂಸ್ಥೆಗೆ ಇದೇ ಉದ್ದೇಶಕ್ಕಾಗಿ ಆರ್ಥಿಕ ಸಹಾಯ ಕೋರಿ ಅರ್ಜಿ ಸಲ್ಲಿಸಿದ್ದಿರಾ? ಹಾಗಾದರೆ ಅದರ ಫಲಿತಾಂಶ? :
   ಇ) ಹಣಕಾಸು ನೆರವನ್ನು ಬೇರೆ ಯಾವುದಾದರೂ ಸಂಸ್ಥೆಯವರು ಈಗಾಗಲೇ ಮಂಜೂರು ಮಾಡಿದ್ದಲ್ಲಿ :

ಅಂತಹ ಸಾಲದ ಮೊತ್ತ ಹಾಗೂ ಅದನ್ನು ಉಪಯೋಗಿಸಲಾದ ಉದ್ದೇಶ. ಇಲ್ಲವಾದಲ್ಲಿ ತಿರಸ್ಕರಿಸಿದ್ದಕ್ಕೆ ಕಾರಣಗಳು (ಮಂಜೂರಾತಿ ಆದೇಶ: ತಿರಸ್ಕರಿಸಿದ ಸಂದೇಶದ ಪ್ರತಿ ಲಗತ್ತಿಸಿ)

5. ನಿಮ್ಮ ಉದ್ದೇಶಿತ ಘಟಕವನ್ನು ಕೈಗಾರಿಕ ಇಲಾಖೆ / ವಾಣಿಜ್ಯ ತೆರಿಗೆ ಇಲಾಖೆ / ಆದಾಯ ತೆರಿಗೆ ಇಲಾಖೆ / ಸ್ಥಳೀಯ ಮುನಿಸಿಪಾಲಿಟಿ / ಪಂಚಾಯಿತಿಯಲ್ಲಿ ನೊಂದಾಯಿಸಿ ಸಂಬಂಧಪಟ್ಟ ಪ್ರಾಧಿಕಾರದಿಂದ ಪ್ರಮಾಣ ಪತ್ರ ಅಥವಾ ಪರವಾನಿಗೆ ಪಡೆದಿದ್ದೀರಾ? :

6. ನೀವು ನಮೂದಿಸಿರುವ ಸ್ಥಳದಲ್ಲಿ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಇರುವ ಮೂಲಭೂತ ಸೌಲಭ್ಯಗಳ ವಿವರ ನೀಡಿರಿ. :

7. ಘಟಕವನ್ನು ಸಂಬಳ ಪಡೆಯುವ ವ್ಯವಸ್ಥಾಪಕರ ನೆರವಿಲ್ಲದೇ ಖುದ್ದಾಗಿ ನಡೆಸುವಷ್ಟು ತಿಳುವಳಿಕೆ / ಜ್ಞಾನ ನಿಮಗೆ ಇದೆಯೇ? :

8. ಘಟಕವನ್ನು ಪ್ರಾರಂಭಿಸಲು ನೀವು ತೆಗೆದುಕೊಂಡಿರುವ ಪೂರ್ವ ಭಾವೀ ಕ್ರಮಗಳೇನು? :

9. ಯೋಜನೆಯನ್ನು ಕಾರ್ಯರೂಪಕ್ಕೆ ತರಲು ತಗಲುವ ಅಂದಾಜು ವೆಚ್ಚ. :

10. ಯೋಜನೆಯನ್ನು ಸಮರ್ಪಕವಾಗಿ ಕಾರ್ಯರೂಪಕ್ಕೆ ತಂದರೆ ವರ್ಷಕ್ಕೆ ಬರಬಹುದಾದ ಅಂದಾಜು ಲಾಭ? :

11. ಉತ್ಪಾದನೆಗೋಸ್ಕರ ತರಲ್ಪಡುವ ಸ್ವಂತ ಸಂಪನ್ಮೂಲಗಳ ಸ್ವಭಾವ ಹಾಗೂ ಪ್ರಮಾಣ :

12. ಉದ್ಯೋಗ ಸಾಮರ್ಥ್ಯ, ಕೌಶಲ್ಯ / ಕೌಶಲ್ಯೇತರ. :

13. ಅರ್ಪಿಸಲಿರುವ ಭದ್ರತೆ :

ಎ) ಭೂಮಿ ಅಥವಾ ಕಟ್ಟಡ :

1. ಮನೆ ಸಂಖ್ಯೆ / ಸರ್ವೆ ನಂ. :
2. ಹಳ್ಳಿ / ತಾಲ್ಲೂಕು / ಜಿಲ್ಲೆ :
3. ಪ್ರಮಾಣ :
4. ಮೌಲ್ಯಮಾಪನ :
5. ವಿಮಾ ಪಾಲಿಸಿಗಳು (ಇದ್ದಲ್ಲಿ) :
6. ಹಕ್ಕು ಯಾರ ಹೆಸರಿನಲ್ಲಿದೆ? :
7. ಭದ್ರತೆಗಾಗಿ ಒದಗಿಸಲ್ಪಡುವ ಸ್ಥಿರಾಸ್ತಿಯ ಪರಭಾರೆಯ ಸ್ವರೂಪ ಹಾಗೂ ಪ್ರಮಾಣ :

ಗಮನಿಸಿ: ಅರ್ಜಿದಾರರಿಗೆ ಯಾವುದೇ ಆಸ್ತಿ ಇಲ್ಲದಿದ್ದ ಪಕ್ಷದಲ್ಲಿ ಭದ್ರತೆಗಾಗಿ ತನ್ನ ಆಸ್ತಿಗಳನ್ನು ಅರ್ಪಿಸಬಲ್ಲ ಜಾಮೀನುದಾರರೊಬ್ಬರನ್ನು ಕರೆತಂದಿದ್ದರೆ ಅಂತಹವರ ಆಸ್ತಿಗಳ ವಿವರಗಳನ್ನು ಕಾಲಂ-13 ಎ 1 ರಿಂದ 7 ರಲ್ಲಿ ನೀಡಬಹುದು.

ಬಿ) ವೈಯಕ್ತಿಕ ಭದ್ರತೆಯನ್ನು ಒದಗಿಸಿದ್ದರೆ :

1. ಜಾಮೀನುದಾರರಾಗಿ ನಿಂತಿರುವ ವ್ಯಕ್ತಿಗಳ ಹೆಸರು :
2. ವಿಳಾಸಗಳು :
3. ಸಾಮಾಜಿಕ ಸ್ಥಾನಮಾನ :
4. ಸಾಲ ತೀರಿಸುವ ಶಕ್ತಿ :

ಸಿ) ಒದಗಿಸಿರುವ ಇತರೇ ಭದ್ರತೆಗಳ ಸ್ವರೂಪ ಹಾಗೂ ವಿವರಗಳು :

14. ನೀವು ಸಾಲ ತೀರಿಸಲು ಬೇಕಾಗಿರುವ ಅವಧಿ ಮತ್ತು ಸಾಲದ ಕಂತುಗಳ ಸಂಖ್ಯೆ :

15. ಘಟಕದ ಸ್ಥಳದ ವಿವರಣೆ :

16. ಕಚ್ಚಾ ಸಾಮಾಗ್ರಿ ಹಾಗೂ ಯಂತ್ರಗಳನ್ನು ಪಡೆಯಲು ಮಾಡಲಾಗಿರುವ ವ್ಯವಸ್ಥೆ ಏನು? :

17. ಮಾರುಕಟ್ಟೆ ಸೌಲಭ್ಯ / ಬೇಡಿಕೆ ಹಾಗೂ ಪೂರೈಕೆಯ ಸ್ಥಿತಿ ವಿವರಿಸಿ / ಯಾವ ಯಾವ ಸ್ಥಳಗಳಲ್ಲಿ ಬೇಡಿಕೆ ಇದೆ, ಈಗಾಗಲೇ ಮಾರಾಟ ಮಾಡುತ್ತಿರುವ ಹಾಗೂ ಈ ಸಿದ್ಧವಸ್ತುಗಳನ್ನು ಮಾಡಲು ಒಪ್ಪಿರುವ ಏಜೆನ್ಸಿಗಳೇನಾದರೂ ಇದ್ದರೆ ವಿವರ ನೀಡುವುದು. :

ಎ) ಹಾಲಿ ಉತ್ಪಾದಕರಿದ್ದರೆ ಅವರೊಂದಿಗೆ ಇರುವ ಪೈಪೋಟಿ ಹಾಗೂ ಅದನ್ನು ಯಾವ ರೀತಿ ತೊಡೆದು ಹಾಕಲಾಗುವುದು ಎಂಬುದರ ಬಗ್ಗೆ ವಿವರ. :

ಬಿ) ಮಾರುಕಟ್ಟೆ ಸಮೀಕ್ಷೆ ಏನಾದರೂ ನಡೆಸಲಾಗಿದೆಯೇ? (ಹಾಗಿದ್ದರೆ ಅದರ ಪ್ರತಿ ಲಗತ್ತಿಸಿ). :

18. ಅಭ್ಯರ್ಥಿಯು ತನ್ನ / ತಮ್ಮ ಅರ್ಜಿಗೆ ಆಧಾರವಾಗಿ ನೀಡಬಯಸುವ ಇನ್ನಾವುದೇ ಮಾಹಿತಿ. :

## ಘೋಷಣೆ

................................... ಹೆಸರಿನ ನಾನು / ನಾವು ಘೋಷಿಸುವುದೇನೆಂದರೇ ಮೇಲ್ಕಾಣಿಸಿರುವ ಮಾಹಿತಿಯನ್ನು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ನಿಯಮಿತದಿಂದ ಹಣಕಾಸು / ಸಾಲ ಸೌಲಭ್ಯ ಪಡೆಯುವ ಉದ್ದೇಶದಿಂದ ಮಾತ್ರ ಸಲ್ಲಿಸಲಾಗಿದ್ದು, ನನ್ನ / ನಮ್ಮ ನಂಬಿಕೆ ಹಾಗೂ ತಿಳುವಳಿಕೆಗನುಗುಣವಾಗಿ ಸರಿ ಇರುತ್ತವೆ ಹಾಗೂ ಯಾವುದೇ ಮುಖ್ಯವಾದ ಅಂಶಗಳನ್ನು ಮರೆಮಾಚಿರುವುದಿಲ್ಲ ಅಥವಾ ತಡೆ ಹಿಡಿದಿರುವುದಿಲ್ಲ. ಮೇಲೆ ನಮೂದಿಸಲಾಗಿರುವ ವಿವರಗಳಿಗೆ ಸಂಪೂರ್ಣವಾಗಿ ಜವಾಬ್ದಾರರಾಗಿರುತ್ತೇನೆ(ವೆ). ನಾನು / ನಾವು ನೀಡಿರುವ ಮಾಹಿತಿಯ ಬಲದ ಮೇಲೆ ನಿಗಮದಿಂದ ಮಂಜೂರಾಗುವ ಸಾಲದ ಮೊತ್ತವನ್ನು ನನಗೆ ಪಾವತಿ ಮಾಡಿದ ನಂತರ ಅಥವಾ ಮೊದಲು ಈ ಘಾರಂನಲ್ಲಿರುವ ಯಾವುದೇ ಮಾಹಿತಿ ತಪ್ಪೆಂದು ಕಂಡುಬಂದಲ್ಲಿ ಸದರಿ ಮೊತ್ತವನ್ನು ವಸೂಲಿ ಮಾಡಿಕೊಳ್ಳಲು ನನ್ನ / ನಮ್ಮ ಒಪ್ಪಿಗೆ ಇದೆ.

ತಮ್ಮ ವಿಶ್ವಾಸಿ,

ಅರ್ಜಿದಾರರ ಹೆಸರು ಮತ್ತು ವಿಳಾಸ

1. ............................................................................

............................................................................

............................................................................

ಸ್ಥಳ :

ದಿನಾಂಕ :

ಅರ್ಜಿದಾರರ ಮಾದರಿ ಸಹಿ

1. ............................................................................

2. ............................................................................

3. ............................................................................

ಟಿಪ್ಪಣಿಗಳು:

1. ನಿಮ್ಮ ಅರ್ಜಿಯ ಪರಿಗಣನೆಗಾಗಿ ಹಾಗೂ ನಿಗಮದಿಂದ ಸಾಲ ಮಂಜೂರಾತಿಗೋಸ್ಕರ ಮೇಲ್ಕಂಡ ವಿವರಗಳ ಅವಶ್ಯಕತೆ ಇದೆ.
2. ಹೆಚ್ಚುವರೀ ಮಾಹಿತಿ ಬೇಕಾದಲ್ಲಿ ಯಥಾಕ್ರಮದಲ್ಲಿ ಪತ್ರವ್ಯವಹಾರ ಮಾಡಲಾಗುವುದು.

## ಜಾಮೀನುದಾರರ ಘೋಷಣೆ:

ನಾನು ಅಂದರೆ ಶ್ರೀ / ಶ್ರೀಮತಿ ........................................................................ ತಂದೆ ........................................................................

ಹಳ್ಳಿ/ಪಟ್ಟಣ .................................................... ತಾಲ್ಲೂಕು ..................................................ಜಿಲ್ಲೆ ..................................................

ಪ್ರತಿಜ್ಞಾಪೂರ್ವಕವಾಗಿ ಹಾಗೂ ಪ್ರಾಮಾಣಿಕವಾಗಿ ಘೋಷಿಸುವುದೇನೆಂದರೆ ನಾನು ಶ್ರೀ / ಶ್ರೀಮತಿ ........................................................................

ತಂದೆ .................................................... ವಾಸಸ್ಥಳ .................................................... ಬೀದಿ ....................................................

ಹಳ್ಳಿ/ಪಟ್ಟಣ .................................................... ತಾಲ್ಲೂಕು ..................................................ಜಿಲ್ಲೆ ..................................................

ಇವರಿಗೆ ................................................................... ರೂ.ಗಳವರೆಗೆ (ಅಕ್ಷರಗಳಲ್ಲಿ ರೂಪಾಯಿ ...................................................................

.................................................... ಗಳು ಮಾತ್ರ) ಜಾಮೀನುದಾರನಾಗಲು ಒಪ್ಪಿರುತ್ತೇನೆ ಹಾಗೂ ನಾನು ....................................................

ರೂ.ಗಳನ್ನು ಬಡ್ಡಿಯೊಂದಿಗೆ ಹಾಗೂ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮಕ್ಕೆ ಅವರು ಈ ಮೊತ್ತವನ್ನು ಹಿಂತಿರುಗಿಸುವಲ್ಲಿ ವಿಫಲರಾದರೆ ಸಂಬಂಧಿಸಿದ ಚಾರ್ಜುಗಳು ಇವುಗಳನ್ನು ಸೇರಿ ಪಾವತಿ ಮಾಡಲು ಒಪ್ಪಿರುತ್ತೇನೆ.

ಸ್ಥಳ :

ಜಾಮೀನುದಾರರ ಸಹಿ

ದಿನಾಂಕ :

## "ದೃಢೀಕರಿಸುವ ಸಾಕ್ಷಾಧಾರ"

ಸಹಿ :

ವಿಳಾಸ :

ಟಿಪ್ಪಣಿ: ಪ್ರತಿಯೊಬ್ಬ ಜಾಮೀನುದಾರರಿಂದಲೂ ಪ್ರತ್ಯೇಕ ಭದ್ರತಾ ಫಾರಂಗಳನ್ನು ಪಡೆಯಬೇಕು.



ಸಂಕಲ್ಪದಿಂದ ಸಾಧನೆ ಸಾಧ್ಯ

## 4. ಸಂಯುಕ್ತ ಸಾಲ ಯೋಜನೆ:

ಮಹಿಳಾ ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಜೊತೆಗೂಡಿ 94-95ನೇ ಸಾಲಿನಿಂದ ಮಹಿಳಾ ಉದ್ಯಮಿಗಳಿಗೆ (ವಾರ್ಷಿಕ ಕುಟುಂಬದ ಆದಾಯ ರೂ. 25000 ಅಥವಾ ಅದಕ್ಕಿಂತಲೂ ಕಡಿಮೆ ಇರುವ) ಗರಿಷ್ಠ ರೂ. 50000 ಗಳವರೆಗೆ ಸಾಲ ಒದಗಿಸುವ ಯೋಜನೆಯನ್ನು ಜಾರಿಗೊಳಿಸುತ್ತಿದೆ. ಸದರಿ ಯೋಜನೆಯನ್ವಯ ಯಾವುದೇ ಉತ್ಪಾದನಾ ಚಟುವಟಿಕೆಗಳಿಗೆ ಉದಾಹರಣೆಗೆ ಸಿದ್ಧ ಉಡುಪುಗಳ ತಯಾರಿಕೆ, ಹಪ್ಪಳ, ಸಂಡಿಗೆ, ಉಪ್ಪಿನಕಾಯಿ ಘಟಕ, ನಿಟ್ಟಿಂಗ್ ರುಬ್ಬುವ ಯಂತ್ರ ಇತರೆ ಹಾಗೂ ಕೆಲವು ಸೇವಾ ಚಟುವಟಿಕೆಗಳಾದ ಟೆಲಿಫೋನ್ ಬೂತ್, ಬೆರಳಚ್ಚು, ಬ್ಯೂಟೀ ಪಾರ್ಲರ್ ಹಾಗೂ ಸಮಾನಾಂತರ ಚಟುವಟಿಕೆಗೆ ಸಾಲ ಒದಗಿಸಲಾಗುವುದು. ವ್ಯಾಪಾರಕ್ಕೆ ಈ ಯೋಜನೆಯಡಿಯಲ್ಲಿ ಸಾಲ ದೊರೆಯುವುದಿಲ್ಲ. ಒಟ್ಟು ಸಾಲದ ಅರ್ಧಭಾಗವನ್ನು ಮಹಿಳಾ ಅಭಿವೃದ್ಧಿ ನಿಗಮವು ಉಳಿದ ಅರ್ಧ ಭಾಗವನ್ನು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ಭರಿಸುತ್ತದೆ. ನಿಗಮದ ಪಾಲಿನ ಸಾಲಕ್ಕೆ ಶೇ. 10ರಷ್ಟು ಬಡ್ಡಿಯನ್ನು ಮತ್ತು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಪಾಲಿನ ಶೇ. 12.5 ರಷ್ಟು ಬಡ್ಡಿಯನ್ನು ವಿಧಿಸಲಾಗುತ್ತದೆ. ಸಾಲವನ್ನು ಗರಿಷ್ಠ 50 ಮಾಸಿಕ ಕಂತುಗಳಲ್ಲಿ ವಸೂಲಿ ಮಾಡಲಾಗುತ್ತದೆ. ಸಾಲ ವಸೂಲಾತಿಯನ್ನು ಸಾಲ ವಿತರಿಸಿದ 6 ತಿಂಗಳ ನಂತರ ಪ್ರಾರಂಭಿಸಲಾಗುತ್ತದೆ. ಈ ಯೋಜನೆಯಡಿಯಲ್ಲಿ ಸಾಲದ ಯಾವುದೇ ಸಹಾಯಧನ ಇರುವುದಿಲ್ಲ.

ಈ ಯೋಜನೆಯಡಿಯಲ್ಲಿ ಪ್ರಯೋಜನ ಪಡೆಯಲು ನಿಗಧಿತ ನಮೂನೆಯಲ್ಲಿ ಅರ್ಜಿದಾರರು ತಾವು ಪ್ರಾರಂಭಿಸಲು ಇಚ್ಚಿಸಿರುವ ಘಟಕದ ಯೋಜನಾ ವರದಿಯೊಂದಿಗೆ ತಮ್ಮ ಜಿಲ್ಲೆಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಹಾಯಕ ನಿರ್ದೇಶಕರಿಗೆ ಅಥವಾ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಜಿಲ್ಲಾ ವ್ಯವಸ್ಥಾಪಕರಿಗೆ ಅರ್ಜಿಗಳನ್ನು ಸಲ್ಲಿಸಬಹುದು. ಬೆಂಗಳೂರು ನಗರ ಜಿಲ್ಲೆಯಲ್ಲಿ ಮಾತ್ರ ಮಹಿಳಾ ಅಭಿವೃದ್ಧಿ ನಿಗಮದ ಕೇಂದ್ರ ಕಛೇರಿಯು ಸದರಿ ಸಾಲ ಯೋಜನೆಯ ಅರ್ಜಿಗಳನ್ನು ನೇರವಾಗಿ ಸ್ವೀಕರಿಸುತ್ತದೆ.

ಸಂಬಂಧಪಟ್ಟ ಸಾಲಿಗೆ ನಿಗಧಿಪಡಿಸಿದ ಗುರಿ ಪ್ರಕಾರ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುವುದು.

ಅರ್ಜಿ ನಮೂನೆ ಈ ಕೆಳಕಂಡಂತಿರುತ್ತದೆ

### ಸಂಯುಕ್ತ ಸಾಲ ಯೋಜನೆ
### (ಕಾಂಪೋಸಿಟ್ ಲೋನ್ ಸ್ಕೀಮ್)

### ಅರ್ಜಿ ನಮೂನೆ

ಸಹಾಯಕ ನಿರ್ದೇಶಕರು,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
.................................... ಜಿಲ್ಲೆ.

1. ಹೆಸರು ಮತ್ತು ಪೂರ್ಣ ಖಾಯಂ ನಿರ್ದಿಷ್ಟ ವಿಳಾಸ :
2. ವಾರ್ಷಿಕ ಕುಟುಂಬದ ಆದಾಯ :
3. ವಯಸ್ಸು :
4. ವಿದ್ಯಾರ್ಹತೆ :
5. ವೈವಾಹಿಕ ಸ್ಥಿತಿ, ವಿವಾಹಿತೆ : ಅವಿವಾಹಿತೆ : ವಿಧವೆ ಅ) ಗಂಡನ ಉದ್ಯೋಗ :
6. ಈಗ ಮಾಡುತ್ತಿರುವ ಕಸುಬು :
7. ಸಾಲ ಕೋರುತ್ತಿರುವ ಕಸುಬಿನ ಹೆಸರು :
8. ಸಾಲ ಕೋರುತ್ತಿರುವ ಕಸುಬಿನಲ್ಲಿ ತರಬೇತಿ ಪಡೆದಿದ್ದರೆ ಪ್ರಮಾಣ ಪತ್ರ ಲಗತ್ತಿಸಿರಿ :
9. ಸಾಲ ಕೇಳುತ್ತಿರುವ ಮೊತ್ತ :
10. ಸಾಲ ಕೋರುತ್ತಿರುವ ಕಸುಬಿನಲ್ಲಿ ಅನುಭವ :
11. ನೀಡಬಹುದಾದ ಭದ್ರತೆ (ಮನೆ, ನಿವೇಶನ, ಜೀವವಿಮೆ ಪಾಲಿಸಿ, ರಾಜ್ಯ ಉಳಿತಾಯ ಪತ್ರ ಇತರೆ) :
12. ಕೊಂಡುಕೊಳ್ಳುವ ಯಂತ್ರಗಳ ವಿವರ ಮತ್ತು ದರ (ದರ ಪಟ್ಟಿ ಲಗತ್ತಿಸಬೇಕು) :
13. ಘಟಕ ಸ್ಥಾಪಿಸುವ ಸ್ಥಳ, ವಿಳಾಸ :
14. ಕೈಗೊಳ್ಳುತ್ತಿರುವ ಘಟಕಕ್ಕೆ ಒದಗಿಸುವ ಸ್ವಂತ ಬಂಡವಾಳ :



ತರಬೇತಿ ಕಾರ್ಯಕ್ರಮದತ್ತ ಒಂದು ಅವಲೋಕನ

15. ಕೈಗೊಳ್ಳುತ್ತಿರುವ ಘಟಕಕ್ಕೆ ಬೇಕಾಗಿರುವ ಕೈ ದುಡಿಮೆ ಬಂಡವಾಳ (ವರ್ಕಿಂಗ್ ಕ್ಯಾಪಿಟಲ್)

16. ಮಾರುಕಟ್ಟೆ ಮಾಡುವ ವಿಧಾನ

**ಸೂಚನೆಗಳು:**

1. ಮೇಲೆ ಕೋರಿರುವ ಯಾವುದೇ ಮಾಹಿತಿ ನೀಡಲು ಸಾಧ್ಯ ವಿಲ್ಲದಿದ್ದಲ್ಲಿ ಈ ಅಂಶವನ್ನು ಸಂಬಂಧಪಟ್ಟ ಕಾಲಂನಲ್ಲಿ ನಮೂದಿಸಬೇಕು.

2. ಈ ಸಾಲ ಯೋಜನೆಯಲ್ಲಿ ಹೊಲಿಗೆ, ಎಂಬ್ರಾಯ್ಡರಿ,ನೇಯ್ಗೆ, ಹಪ್ಪಳ, ಉಪ್ಪಿನಕಾಯಿ ತಯಾರಿಕೆ, ರುಬ್ಬುವ ಯಂತ್ರ, ಟೆಲಿಫೋನ್ ಬೂತ್, ಮತ್ತಿತರ ಯಾವುದೇ ಉತ್ಪಾದನಾ ಅಥವಾ ಸೇವಾ ಚಟುವಟಿಕೆಗಳಿಗೆ ಮಾತ್ರ ಸಾಲ ಪಡೆಯ ಬಹುದು. ವ್ಯಾಪಾರಕ್ಕೆ ಸಾಲ ಪಡೆಯಲು ಸಾಧ್ಯವಿರುವುದಿಲ್ಲ.

## ಯೋಜನಾ ವರದಿ

**ಸಂಕ್ಷಿಪ್ತ ವಿವರ:**

ಯಾವುದೇ ಒಂದು ಯೋಜನಾ ವರದಿಯು ಉದ್ದಿಮೆದಾರರು ಸ್ಥಾಪಿಸಲು ಉದ್ದೇಶಿಸಿರುವ ಉದ್ಯಮದ ಬಗ್ಗೆ ಸಮಗ್ರ ಮಾಹಿತಿ ಯನ್ನು ಒದಗಿಸುವಂತಿರಬೇಕು. ಇದಕ್ಕೆ ಸಂಬಂಧಿಸಿದಂತೆ ಕೆಲವು ಸಂಕ್ಷಿಪ್ತ ಮಾರ್ಗದರ್ಶಿ ಸೂತ್ರಗಳನ್ನು ಈ ಕೆಳಗೆ ಒದಗಿಸಲಾಗಿದೆ. ಯೋಜನಾ ವರದಿಯನ್ನು ಕೆಳ ಕಾಣಿಸಿದ ಆಧಾರಗಳ ಮೇಲೆ ಸಿದ್ಧಪಡಿಸಬೇಕು.

1. ಯೋಜನೆ : ಘಟಕದ ಸಂಕ್ಷಿಪ್ತ ವಿವರ,ಉದ್ದೇಶಗಳು, ವಿಶೇಷ ಲಕ್ಷಣಗಳು.

2. ಘಟಕದಲ್ಲಿ ಉತ್ಪಾದನೆ ಮಾಡುವ ವಸ್ತು ಯಾವುದು ಹಾಗೂ ಮಾಡುವ ವಿಧಾನ ತಿಳಿಸಿರಿ. ಮಾರಾಟ ವ್ಯವಸ್ಥೆ ಬಗ್ಗೆ ವಿವರಿಸಿರಿ.
(ಬೇಡಿಕೆ ಆದೇಶಗಳನ್ನು ಲಗತ್ತಿಸಿರಿ)

3. ಘಟಕ ಸ್ಥಾಪಿಸುವ ಸ್ಥಳದ ವಿಸ್ತೀರ್ಣ ಮತ್ತು ಸದರಿ ಸ್ಥಳಕ್ಕೆ ಲಭ್ಯವಿರಬಹುದಾದಂತಹ ಸಂಪರ್ಕ : ಸಾಗಣೆ ಸೌಲಭ್ಯದ ವಿವರ

4. ಬೇಕಾಗುವ ವಿದ್ಯುತ್ ಪ್ರಮಾಣ (ಅವಶ್ಯಕವಿದ್ದಲ್ಲಿ)

5. ನೀರಿನ ಪ್ರಮಾಣ (ಅವಶ್ಯಕವಿದ್ದಲ್ಲಿ)

6. ಘಟಕದಲ್ಲಿ ಬೇಕಾಗುವ ಕೆಲಸಗಾರರ ಸಂಖ್ಯೆ ಮತ್ತು ಅವರುಗಳ ನೈಪುಣ್ಯತೆ ವಿವರಗಳು

7. ಘಟಕಕ್ಕೆ ಬೇಕಾಗುವ ಕೆಲಸಗಾರರನ್ನು ಎಲ್ಲಿಂದ ಪಡೆಯಲಾಗುವುದು

8. ಕೈಗಾರಿಕೆ ಹಾಗೂ ವಾಣಿಜ್ಯ ಇಲಾಖೆಯ ನೋಂದಣಿ ಸಂಖ್ಯೆ (ಇದ್ದಲ್ಲಿ)

9. ಈಗಾಗಲೇ ಈ ಚಟುವಟಿಕೆಗೆ ಸಾಲ ಸೌಲಭ್ಯ ಪಡೆದಿದ್ದಲ್ಲಿ ವಿವರ ನೀಡಿ

10. ಅ. ಯೋಜನೆ, ವೆಚ್ಚ

ಆ. ಕಟ್ಟಡ ಬಾಡಿಗೆ (ಸ್ವಂತ ಇದ್ದಲ್ಲಿ ಅನ್ವಯಿಸುವುದಿಲ್ಲ)

ಇ. ಯಂತ್ರೋಪಕರಣಗಳು

ಈ. ದುಡಿಯುವ ಬಂಡವಾಳ
(ಕಚ್ಚಾ ಪದಾರ್ಥಗಳ ಬೆಲೆಯನ್ನೂ ಒಳಗೊಂಡಂತೆ)

ಉ. ಇತರೆ

---

ಒಟ್ಟು

---

11. **ಘಟಕದ ಆರ್ಥಿಕತೆ (ಮಾಹೆಯಾನ):**

**ವೆಚ್ಚಗಳು:**

ಅ. ಬಾಡಿಗೆ
ಆ. ವಿದ್ಯುಚ್ಛಕ್ತಿ
ಇ. ನೀರು
ಈ. ವೇತನ ಕೂಲಿ
ಉ. ಕಚ್ಚಾ ಪದಾರ್ಥಗಳು
ಊ. ಸಾಲದ ಮೇಲೆ ಬಡ್ಡಿ
ಋ. ಆಡಳಿತಾತ್ಮಕ ವೆಚ್ಚ
ಎ. ಇತರೆ (ನಮೂದಿಸಿರಿ)




ಆಧುನೀಕರಣದಲ್ಲಿ ಸ್ತ್ರೀ ಮಂಚೂಣಿಯಲ್ಲಿ

---

**ಒಟ್ಟು**

---

**12. ತಿಂಗಳಿಗೆ ಬರುವ ಆದಾಯ**

**13. ಉದ್ದೇಶಿತ ಲಾಭ**

**ಟಿಪ್ಪಣಿ:** ತಿಂಗಳಿಗೆ ಬರುವ ಆದಾಯದಲ್ಲಿ ಖರ್ಚನ್ನು ಕಳೆದರೆ ಉಳಿಯುವ ಹಣ ಲಾಭ ಎಂದು ಪರಿಗಣಿಸಬಹುದು. ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಕೋರುವ ಕೆಲವು ಪ್ರಮಾಣ ಪತ್ರಗಳು ಮತ್ತು ಜಾಮೀನು,ಭದ್ರತೆ ಒದಗಿಸುವುದು ಸಾಲ ಮಂಜೂರಾತಿ ಪಡೆಯಲು ಅವಶ್ಯವಿರುತ್ತದೆ.

ಸಂಬಂಧಪಟ್ಟ ಸಾಲಿಗೆ ನಿಗಧಿಪಡಿಸಿದ ಗುರಿ ಪ್ರಕಾರ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುವುದು.

### ಸಂಪರ್ಕ ಕಛೇರಿ:

1. ಸಂಬಂಧಪಟ್ಟ ಜಿಲ್ಲೆಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಹಾಯಕ ನಿರ್ದೇಶಕರು:
2. ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ಕೈಗಾರಿಕಾ ಕೇಂದ್ರ ಪ್ರಧಾನ ವ್ಯವಸ್ಥಾಪಕರು.
3. ಬೆಂಗಳೂರು ನಗರದ ವ್ಯಾಪ್ತಿಯಲ್ಲಿನ ಸಂಸ್ಥೆಗಳು ನೇರವಾಗಿ ಮಹಿಳಾ ಅಭಿವೃದ್ಧಿ ನಿಗಮದ ಪ್ರಧಾನ ಕಛೇರಿಯನ್ನು ಸಂಪರ್ಕಿಸುವುದು.

## 5. ಕಂಪ್ಯೂಟರ್ ತರಬೇತಿ ಕಾರ್ಯಕ್ರಮ:

ವಿದ್ಯಾವಂತ ನಿರುದ್ಯೋಗಿ ಬಾಲಕಿಯರಿಗೆ : ಮಹಿಳೆಯರಿಗೆ ಮಹಿಳಾ ಅಭಿವೃದ್ಧಿ ನಿಗಮವು ಸುವ್ಯವಸ್ಥಿತ ಗಣಕ ಕೇಂದ್ರಗಳ ಮುಖಾಂತರ ಕಂಪ್ಯೂಟರ್ ತರಬೇತಿಯನ್ನು ಉಚಿತವಾಗಿ ವ್ಯವಸ್ಥೆ ಗೊಳಿಸುತ್ತಿದೆ. ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಿಗೆ ನಿಗಮದ ಕೇಂದ್ರ ಕಛೇರಿಯಿಂದ ಮತ್ತು ಇತರೆ ಜಿಲ್ಲೆಗಳಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಹಾಯಕ ನಿರ್ದೇಶಕರುಗಳ ವತಿಯಿಂದ ಜಾಹಿರಾತು ಮುಖಾಂತರ ಅರ್ಜಿ ಗಳನ್ನು ಕರೆದು ಕಾಲ ಕಾಲಕ್ಕೆ ತರಬೇತಿ ಕಾರ್ಯಕ್ರಮವನ್ನು ವ್ಯವಸ್ಥೆಗೊಳಿಸಲಾಗುತ್ತದೆ.

ಮಹಿಳಾ ಅಭಿವೃದ್ಧಿ ನಿಗಮವು ಎರಡು ರೀತಿಯ ಕಂಪ್ಯೂಟರ್ ತರಬೇತಿಯನ್ನು ಅಳವಡಿಸಿದ್ದು, ಇವುಗಳ ಅವಧಿ 3 ಮತ್ತು 6 ತಿಂಗಳುಗಳಾಗಿರುತ್ತದೆ. ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಕನಿಷ್ಠ 50 ಅಂಕಗಳಿಸಿರುವ ಅಭ್ಯರ್ಥಿಗಳು 3 ತಿಂಗಳ ಡೇಟಾ ಎಂಟ್ರಿ ಕೋರ್ಸ್‌ಗೆ ಅರ್ಜಿಸಲ್ಲಿಸಲು ಅರ್ಹರಾಗಿರುತ್ತಾರೆ. ಪಿ.ಯು.ಸಿ. ಪರೀಕ್ಷೆಯಲ್ಲಿ ಶೇ. 50 ಅಂಕಗಳನ್ನು ಗಳಿಸಿ ಉತ್ತೀರ್ಣರಾಗಿರುವ ಅಥವಾ ಯಾವುದಾದರೂ ಪದವಿ ಪರೀಕ್ಷೆಯಲ್ಲಿ ಶೇ. 45 ಅಂಕಗಳಿಸಿ ಉತ್ತೀರ್ಣರಾಗಿರುವ ಅಭ್ಯರ್ಥಿಗಳು 6 ತಿಂಗಳ ಕೋರ್ಸ್‌ಗೇ ಅರ್ಜಿಸಲ್ಲಿಸಲು ಅರ್ಹರಾಗಿರುತ್ತಾರೆ. ಫಲಾನುಭವಿ ಗಳು ಗಣಕ ಕೇಂದ್ರಗಳಿಗೆ ನೀಡಬೇಕಾಗಿರುವ ವಂತಿಕೆಯನ್ನು ನಿಗಮವು ನೀಡುತ್ತದೆ. ತರಬೇತಿ ಪಡೆಯುವ ಫಲಾನುಭವಿಗಳಿಗೆ ಸ್ಟೈಪಂಡ್ ನೀಡಲಾಗುವುದಿಲ್ಲ.

ಸಂಬಂಧಪಟ್ಟ ಸಾಲಿಗೆ ನಿಗಧಿಪಡಿಸಿದ ಗುರಿ ಪ್ರಕಾರ ಕಾರ್ಯಕ್ರಮ ವನ್ನು ಅನುಷ್ಠಾನಗೊಳಿಸಲಾಗುವುದು.

### ಸಂಪರ್ಕ ಕಛೇರಿ:

1. ಬೆಂಗಳೂರು ನಗರದ ವ್ಯಾಪ್ತಿಯಲ್ಲಿನ ಸಂಸ್ಥೆಗಳು ನೇರವಾಗಿ ಮಹಿಳಾ ಅಭಿವೃದ್ಧಿ ನಿಗಮದ ಪ್ರಧಾನ ಕಛೇರಿಯನ್ನು ಸಂಪರ್ಕಿಸುವುದು.
2. ಸಂಬಂಧಪಟ್ಟ ಜಿಲ್ಲೆಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಹಾಯಕ ನಿರ್ದೇಶಕರು.

## 6. ಉದ್ಯಮಶೀಲತಾ ಜಾಗೃತ ಕಾರ್ಯಕ್ರಮ:

ಬಡತನದ ರೇಖೆಗಿಂತ ಕೆಳಗಿರುವವರು ಹಾಗೂ ಬಡತನದ ರೇಖೆಯ ಅಂಚಿನಲ್ಲಿರುವ ಮಧ್ಯಮವರ್ಗದ ಕೊಳಚೆ ಪ್ರದೇಶದ ಮಹಿಳೆಯರಿಗಾಗಿ ಹಾಗೂ ಶಾಲಾ ಕಾಲೇಜು ವಿದ್ಯಾರ್ಥಿನಿಯರಿಗೆ ಸ್ವಯಂ ಉದ್ಯೋಗ ಹಮ್ಮಿಕೊಳ್ಳಲು ಮಾರ್ಗದರ್ಶನವನ್ನು ಉದ್ಯಮಶೀಲತಾ ಜಾಗೃತ ಕಾರ್ಯಕ್ರಮದಲ್ಲಿ ಒದಗಿಸಲಾಗುತ್ತಿದೆ.

RB 11.4
06071
N95
HEALTH CELL



ಮಹಿಳಾ ಜಾಗೃತಿಗೆ
ಜಯಭೇರಿ ಮೊಳಗುವೆವು

ಈ ಕಾರ್ಯಕ್ರಮದಲ್ಲಿ ಮಹಿಳೆಯರ ಸರ್ವತೋಮುಖ ಅಭಿವೃದ್ಧಿಗೆ ಸಂಬಂಧಿಸಿದ ಅನೇಕ ವಿಷಯಗಳಾದ ಆರೋಗ್ಯ, ಪೌಷ್ಟಿಕತೆ, ಕುಟುಂಬ ಯೋಜನೆ, ಸ್ವಚ್ಛತೆ, ಕಾನೂನಿನ ರಕ್ಷಣೆ, ಮಹಿಳೆಯರ ಸ್ಥಾನಮಾನ ಹಾಗೂ ಇಲಾಖೆ, ನಿಗಮಗಳ ವತಿಯಿಂದ ಮಹಿಳೆಯರಿಗಾಗಿ ಸಿಗುವ ಅನೇಕ ಯೋಜನೆಗಳ ವಿವರಗಳನ್ನು ಗ್ರಾಮೀಣ, ಪಟ್ಟಣ, ಕೊಳಚೆ ಪ್ರದೇಶದ ಮಹಿಳೆಯರಿಗೆ ತಲುಪಿಸಲಾಗುವುದು.

ಉದ್ಯಮಶೀಲತಾ ಜಾಗೃತ ಕಾರ್ಯಕ್ರಮದಲ್ಲಿ ಅಧ್ಯಯನ ಮಾಡುವ : ವಿಮರ್ಶಿಸುವ ಕೆಲವು ವಿಷಯಗಳನ್ನು ಈ ಕೆಳಗೆ ಉದಾಹರಿಸಲಾಗಿದೆ:

i. ಸ್ವಉದ್ಯೋಗ ಯೋಜನೆಗಳು
ii. ಬ್ಯಾಂಕು, ಸರಕಾರದ ವತಿಯಿಂದ ಹಣಕಾಸು ಸೌಲಭ್ಯ
iii. ಉಳಿತಾಯ
iv. ಮಹಿಳೆಯರ ಸ್ಥಾನಮಾನ
v. ಮಹಿಳೆ ಮತ್ತು ಕಾನೂನು
vi. ಮಹಿಳೆ ಮತ್ತು ಮಹಿಳಾ ಪೋಲೀಸ್
vii. ಮಹಿಳೆ ಮತ್ತು ಆರೋಗ್ಯ
viii. ರಾಜಕೀಯದಲ್ಲಿ ಮಹಿಳೆಯರ ಪಾತ್ರ
ix. ಮಹಿಳೆ ಮತ್ತು ಸಾಕ್ಷರತೆ

ಇಷ್ಟೇ ಅಲ್ಲದೆ ಮಹಿಳೆಯರಿಗೆ ಅನ್ವಯಿಸುವ ಅಥವಾ ಉಪಯೋಗಕಾರಿಯಾಗುವ ಯಾವುದೇ ವಿಷಯಗಳನ್ನು ಜಾಗೃತ ಕಾರ್ಯಕ್ರಮಗಳಲ್ಲಿ ಅಳವಡಿಸಿಕೊಳ್ಳಬಹುದು.

ಜಾಗೃತ ಕಾರ್ಯಕ್ರಮಗಳಿಗೆ ಈ ಕೆಳಕಂಡ ಇಲಾಖೆಗಳಿಂದ ಸಂಪನ್ಮೂಲ ವ್ಯಕ್ತಿಗಳನ್ನು ಪಡೆಯಬಹುದು:

ಅರಣ್ಯ ಇಲಾಖೆ, ಜಿಲ್ಲಾ ಪಂಚಾಯತ್, ಮೀನುಗಾರಿಕೆ ಇಲಾಖೆ, ರೇಷ್ಮೆ ಇಲಾಖೆ, ಪಶುಸಂಗೋಪನಾ ಇಲಾಖೆ, ಕೃಷಿ ಇಲಾಖೆ, ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕೈಗಾರಿಕಾ ಹಾಗೂ ವಾಣಿಜ್ಯ ಇಲಾಖೆ ಹಾಗೂ ಎಲ್ಲ ಸರ್ಕಾರೀ ಇಲಾಖೆಗಳು, ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳು, ಮಹಿಳಾ ಉದ್ಯಮಿಗಳು, ವಿಶ್ವವಿದ್ಯಾನಿಲಯದ ಸಂಪನ್ಮೂಲ ವ್ಯಕ್ತಿಗಳು, ಶಿಕ್ಷಣ ಸಂಸ್ಥೆಗಳಿಂದ ವಿದ್ವಾಂಸರುಗಳು, ಮಹಿಳಾ ಸಂಘಟಕರು, ಸಂಶೋಧಕರು ಹಾಗೂ ಇತರೆ ಸೂಕ್ತ ಪ್ರತಿನಿಧಿಗಳನ್ನು ಕರೆಸಬಹುದು.

ಜಾಗೃತ ಕಾರ್ಯಕ್ರಮಕ್ಕೆ ಈ ಕೆಳಕಾಣಿಸಿದ ಮಾಹಿತಿಗಳೊಂದಿಗೆ ಪ್ರಸ್ತಾವನೆ ಸಲ್ಲಿಸಬೇಕು:

1. ಕಾರ್ಯಕ್ರಮ ಮಾಡುವ ಸ್ಥಳ ಮತ್ತು ದಿನಾಂಕ
2. ವಿಷಯ ಪರಿಣಿತರ ಪಟ್ಟಿ
3. ಚರ್ಚಿಸುವ ವಿಷಯಗಳ ಪಟ್ಟಿ
4. ವಿಷಯಕ್ಕನುಗುಣವಾಗಿ ಸಮಯದ ಹಂಚಿಕೆ
5. ಖರ್ಚು ವೆಚ್ಚದ ಅಂದಾಜು ಪಟ್ಟಿ
6. ಸಂಸ್ಥೆಯ ನೋಂದಣಿ ಪಟ್ಟಿ
7. ಕಾರ್ಯಕ್ರಮಕ್ಕೆ ಒಳಪಡುವ ಪಟ್ಟಣ, ಪ್ರದೇಶ (ಗ್ರಾಮ, ಕೊಳಚೆ ಪ್ರದೇಶ, ಪಟ್ಟಣ ಇವುಗಳ ವಿವರ).
8. ಭಾಗವಹಿಸುವ ಮಹಿಳೆಯರ ಸಂಖ್ಯೆ

ಈಗ ಜಾರಿಯಲ್ಲಿರುವಂತೆ ಪ್ರತಿ ಇ ಎ ಪಿ ಕಾರ್ಯಕ್ರಮಕ್ಕೆ 3,000 ರೂ.ಗಳಷ್ಟು ಅನುದಾನವನ್ನು ನೀಡಬಹುದಾಗಿದೆ. ಆದರೆ ಶಾಲಾ ಕಾಲೇಜು ವಿದ್ಯಾರ್ಥಿನಿಯರಿಗೆ ನಡೆಸುವ ಕಾರ್ಯಕ್ರಮಗಳಿಗೆ 2,000 ರೂ.ಗಳಿಗೆ ಮಾತ್ರ ಅನುದಾನ ಒದಗಿಸಬಹುದು. ಪ್ರತಿ ಇ ಎ ಪಿ ಕಾರ್ಯಕ್ರಮವನ್ನು ಒಂದರಿಂದ ಎರಡು ದಿನಗಳು ನಡೆಸಬೇಕಾಗಿರುತ್ತದೆ. ಒಂದು ಕಾರ್ಯಕ್ರಮದಲ್ಲಿ ಕನಿಷ್ಠ 100 ಮಹಿಳೆಯರನ್ನು ಸಂಘಟಿಸಬೇಕು.

ಸಂಬಂಧಪಟ್ಟ ಸಾಲಿಗೆ ನಿಗದಿಪಡಿಸಿದ ಗುರಿ ಪ್ರಕಾರ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುವುದು.

### ಸಂಪರ್ಕ ಕಛೇರಿ:

1. ಸಂಬಂಧಪಟ್ಟ ಜಿಲ್ಲೆಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಹಾಯಕ ನಿರ್ದೇಶಕರು.
2. ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ಕೈಗಾರಿಕಾ ಕೇಂದ್ರ ಪ್ರಧಾನ ವ್ಯವಸ್ಥಾಪಕರು.
3. ಬೆಂಗಳೂರು ನಗರದ ವ್ಯಾಪ್ತಿಯಲ್ಲಿನ ಸಂಸ್ಥೆಗಳು ನೇರವಾಗಿ ಮಹಿಳಾ ಅಭಿವೃದ್ಧಿ ನಿಗಮದ ಪ್ರಧಾನ ಕಛೇರಿಯನ್ನು ಸಂಪರ್ಕಿಸುವುದು.

# 7. ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮ:

ಮಹಿಳೆಯರು ಅನೇಕ ಕಾರಣಗಳಿಂದ ಮಹಿಳೆಯರಿಗಾಗಿಯೇ ಮೀಸಲಿಟ್ಟಿರುವ ಯೋಜನೆಗಳ ಅನುಕೂಲತೆಗಳನ್ನು ಪಡೆಯುತ್ತಿಲ್ಲ. ಆದುದರಿಂದ ಇವರಿಗೆ ಅರಿವು ಮೂಡಿಸುವ ತಿಳುವಳಿಕೆ ನೀಡುವ ಕಾರ್ಯಕ್ರಮಗಳ ನಂತರ ಆದಾಯ ಉತ್ಪನ್ನ ಚಟುವಟಿಕೆಗಳಲ್ಲಿ ಸಣ್ಣ ಕೈಗಾರಿಕೆಗಳಲ್ಲಿ ಹಾಗೂ ಸ್ವಯಂ ನಿರ್ವಹಣೆ ಮಾಡಲು ಅನುವಾಗುವ ತರಬೇತಿಯನ್ನು ವ್ಯವಸ್ಥೆಗೊಳಿಸಲಾಗುತ್ತಿದೆ. ಈ ಕಾರ್ಯಕ್ರಮದಲ್ಲಿ ಯೋಜನಾ ವರದಿಯನ್ನು ತಯಾರಿಸುವ ಬಗ್ಗೆ, ವಸ್ತುಗಳನ್ನು ಗುರುತಿಸುವಿಕೆಯ ರೀತಿ, ಮಾರುಕಟ್ಟೆಯನ್ನು ವಸ್ತುಗನುಸಾರವಾಗಿ ಹೇಗೆ ಮಾಡಬೇಕೆನ್ನುವ ಬಗ್ಗೆ, ಅದರಿಂದಾಗುವ ಉಪಯುಕ್ತತೆ ಕೈಗಾರಿಕೆಗಳನ್ನು ವ್ಯವಸ್ಥಿತ ರೀತಿ ನಡೆಸುವುದರ ಬಗ್ಗೆ ತಿಳಿಸಲಾಗುವುದು. ಇದಲ್ಲದೆ 10 ದಿನದ ಈ ಕಾರ್ಯಕ್ರಮದಲ್ಲಿ ಕೈಗಾರಿಕಾ ಘಟಕಗಳಿಗೆ ಭೇಟಿ ನೀಡಿಕೆ ಹಾಗೂ ಮಾನಸಿಕವಾಗಿ ವ್ಯಕ್ತಿತ್ವದಲ್ಲಿ ಬೆಳಸಬೇಕಾಗುವ ಗುಣಗಳ ಬಗ್ಗೆ ತಿಳಿಸಲಾಗುವುದು.

ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮವನ್ನು ಕನಿಷ್ಠ ಎರಡು ವರ್ಷಗಳ ಹಿಂದೆ ಸ್ಥಾಪಿತವಾಗಿ ಮಹಿಳೆಯರ ಆರ್ಥಿಕ ಸುಧಾರಣೆ ಮತ್ತು ಸರ್ವಾಂಗೀಣ ಅಭಿವೃದ್ಧಿಗೆ ವಿವಿಧ ರೀತಿಯಲ್ಲಿ ಶ್ರಮಿಸುತ್ತಿರುವ ಸಂಘಗಳ ಮೂಲಕ ಸೌಕರ್ಯಗಳನ್ನು ಹೊಂದಿದ ಸಂಘ ಸಂಸ್ಥೆಗಳಿಗೆ ಮಾತ್ರ ಮಂಜೂರು ಮಾಡಲಾಗುವುದು.

ಅರ್ಹತೆಯನ್ನು ಪಡೆದಿರುವ ಸಂಘ ಸಂಸ್ಥೆಗಳು:

ಈ ಕಾರ್ಯಕ್ರಮವನ್ನು ಸೀಡಾಕ್, ಜಿಲ್ಲಾ ಕೈಗಾರಿಕಾ ಕೇಂದ್ರ, ಸಣ್ಣ ಕೈಗಾರಿಕಾ ಸೇವಾ ಸಂಸ್ಥೆ, ಅವೇಕ್ ಹಾಗೂ ಇತರೆ ತರಬೇತುದಾರರನ್ನು ಹೊಂದಿರುವ ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮ ನಡೆಸಲು ಮಾನ್ಯತೆ ಪಡೆದಿರುವ ಸಂಸ್ಥೆಗಳು, ಹಾಗೂ ನಿಗಮದ ವತಿಯಿಂದ ತರಬೇತಿ ಪಡೆದಿರುವ ಸಂಸ್ಥೆಗಳಿಗೆ ಒದಗಿಸಲಾಗುವುದು.

ಅವಧಿ: ಕನಿಷ್ಠ 10 ದಿನಗಳು
ಭಾಗವಹಿಸಬೇಕಾದ ಅಭ್ಯರ್ಥಿಗಳು: 30 ಮಹಿಳೆಯರು
ಆಯವ್ಯಯ: ರೂ. 25,000

## ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮ ಅರ್ಜಿ ನಮೂನೆ

1. ಸಂಸ್ಥೆಯ ಹೆಸರು ವಿಳಾಸ
2. ಸಂಸ್ಥೆ ನೋಂದಾಯಿತಿ : ನವೀಕರಿಸಿದ ಪ್ರಮಾಣ ಪತ್ರ :
3. ಆಡಳಿತ ಮಂಡಳಿ ಸದಸ್ಯರ ಪಟ್ಟಿ :
4. ನಿಮ್ಮ ಕೇಂದ್ರ ಸಂಸ್ಥೆಯಿಂದ ಮಹಿಳಾ ಅಭಿವೃದ್ಧಿಗಾಗಿ ಕೈಗೊಂಡಿರುವ ಕೆಲಸ ಕಾರ್ಯಗಳ ವಿವರಗಳು :
5. ಸಂಸ್ಥೆಯಲ್ಲಿರುವ ಒಟ್ಟು ಸದಸ್ಯರ ಸಂಖ್ಯೆ :
6. ಆದಾಯ ಉತ್ಪನ್ನಕರ ಚಟುವಟಿಕೆಗಳ ವಿವರಗಳನ್ನು ತಿಳಿಸುವುದು :
7. ಈ ಮೊದಲು ಉದ್ಯಮಶೀಲತ ಜಾಗೃತಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವಿರಾ? ಹಾಗಾದರೆ ಎಷ್ಟು ಕಾರ್ಯಕ್ರಮಗಳನ್ನು ನಡೆಸಲಾಗಿದೆ. ಪ್ರಗತಿಯ ವಿವರ ನೀಡುವುದು. ಹೆಚ್ಚಿನ ವಿಷಯ ತಿಳಿಸಲು ಬೇರೆ ಬಿಳಿಹಾಳೆ ಉಪಯೋಗಿಸುವುದು. :
8. ನಿಮ್ಮ ಸಂಸ್ಥೆಯಿಂದ ಉದ್ಯಮಶೀಲ ಅಭಿವೃದ್ಧಿ ಕಾರ್ಯಕ್ರಮ ನಡೆಸಲು ಯಾವುದಾದರೂ ತರಬೇತುದಾರರ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿರುವಿರಾ? ಹೌದಾದರೆ ಅದರ ಪ್ರಮಾಣ ಪತ್ರವನ್ನು ಲಗತ್ತಿಸಿರಿ. :
9. ನೀವು ಉದ್ಯಮಶೀಲ ಜಾಗೃತಿ,ಅಭಿವೃದ್ಧಿ ಕಾರ್ಯಕ್ರಮ ನಡೆಸಲು ಅಭ್ಯರ್ಥಿಗಳನ್ನು ಯಾವ ರೀತಿ ಆಯ್ಕೆ ಮಾಡುವಿರಿ :
10. ಈ ಕಾರ್ಯಕ್ರಮದಲ್ಲಿ ತಿಳಿಸಬಹುದಾದ ವಿಷಯದ ಬಗ್ಗೆ ವಿವರಣೆ ಹಾಗೂ ಕರೆಸಬಹುದಾದ ಪರಿಣತರ ಪಟ್ಟಿಯನ್ನು ಲಗತ್ತಿಸಿರಿ. (ವಿವರವಾದ ಮಾಹಿತಿ ನೀಡುವುದು) :
11. ಪರಿಸರಕ್ಕೆ ತಕ್ಕ ಸಣ್ಣ ಅತಿ ಸಣ್ಣ ಆದಾಯ ಉತ್ಪನ್ನಕರ ಚಟುವಟಿಕೆಗಳ ಸಮಗ್ರ ಪಟ್ಟಿಯನ್ನು ಲಗತ್ತಿಸತಕ್ಕದ್ದು. :
12. ತರಬೇತಿ ಪಡೆದ ನಂತರ ಸ್ವಂತ ಕೈಗಾರಿಕೆ ಉದ್ಯಮಗಳನ್ನು ಕೈಗೊಳ್ಳಲು ಅಭ್ಯರ್ಥಿಗಳಿಗೆ ಯಾವ ರೀತಿ ಸಹಾಯ ಸೌಲಭ್ಯವನ್ನು ಒದಗಿಸುವಿರಿ. :
13. ಕಾರ್ಯಕ್ರಮ ನಡೆಸುವ ಊರು, ಸ್ಥಳ, ವಿಳಾಸವನ್ನು ಕೊಡುವುದು :
14. ವಿವರವಾದ ಅಂದಾಜು ವೆಚ್ಚದ ಪಟ್ಟಿ ಲಗತ್ತಿಸಬೇಕು :

ಇ ಎ ಪಿ, ಇ ಡಿ ಪಿ ಪ್ರಸ್ತಾವನೆಗಳನ್ನು ಜಿಲ್ಲಾ, ನಿಗಮದ ವ್ಯವಸ್ಥಾಪಕರಾದ ಸಹಾಯಕ ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಥವಾ ಪ್ರಧಾನ ವ್ಯವಸ್ಥಾಪಕರು, ಜಿಲ್ಲಾ ಕೈಗಾರಿಕಾ ಕೇಂದ್ರ ಇವರ ಮೂಲಕ ಸಲ್ಲಿಸತಕ್ಕದ್ದು :

## ಮಾದರಿ ಕಾರ್ಯಕ್ರಮ:

| | | | | |
|---|---|---|---|---|
| ಒಂದನೇ ದಿನ | ಅಭ್ಯರ್ಥಿಗಳ ಅನಿಸಿಕೆ ಹಾಗೂ ನಿರೀಕ್ಷೆ | ಮಹಿಳಾ ಅಭಿವೃದ್ಧಿ ನಿಗಮದ ಪಾತ್ರ | ಸಂಸ್ಥೆಯ ಚಟುವಟಿಕೆಗಳು | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಇರುವ ಯೋಜನೆಗಳು |
| ಎರಡನೇ ದಿನ | ಉದ್ಯಮಶೀಲತಾ ಅಭಿವೃದ್ಧಿ ಎಂದರೇನು? | ಉದ್ಯಮಿಯಲ್ಲಿ ಇರಬೇಕಾದ ಗುಣಲಕ್ಷಣಗಳು | ಮಹಿಳಾ ಉದ್ಯಮ ಶೀಲತೆ | ಸಣ್ಣ ಕೈಗಾರಿಕೆಗಳ ಬಗ್ಗೆ ಮಾಹಿತಿ |
| ಮೂರನೇ ದಿನ | | ಸ್ವಸಹಾಯ ಪ್ರೇರಣಾ ತರಬೇತಿ ಆಟಗಳು | | |
| ನಾಲ್ಕನೇ ದಿನ | | ಸ್ವಸಹಾಯ ಪ್ರೇರಣಾ ತರಬೇತಿ ಆಟಗಳು | | |
| ಐದನೇ ದಿನ | ಹಮ್ಮಿಕೊಳ್ಳಬಹುದಾದಂತಹ ಆದಾಯ ಉತ್ಪನ್ನ ಘಟಕಗಳಿಗೆ ಇರುವ ಸಹಾಯ ಸೌಲಭ್ಯ ಹಾಗೂ ಅವಕಾಶಗಳು | ಮಾರುಕಟ್ಟೆ ಸಮೀಕ್ಷೆ | ಮಾರುಕಟ್ಟೆ ಸಮೀಕ್ಷೆ | ಮಹಿಳಾ ಉದ್ಯಮಿ ಸಂದರ್ಶನ |
| ಆರನೇ ದಿನ | | ಕೈಗಾರಿಕಾ ಘಟಕಗಳಿಗೆ ಭೇಟಿ | | |
| ಏಳನೇ ದಿನ | ಕೈಗಾರಿಕೆ : ಆದಾಯ ಉತ್ಪನ್ನಕರ ಚಟುವಟಿಕೆಗಳನ್ನು ಕೈಗೊಳ್ಳಲು ಪಾಲಿಸಬೇಕಾದ ನೀತಿ ನಿಯಮಗಳು | ಸರಳ ವ್ಯವಸ್ಥಾ ರೂಪು ರೇಖೆಗಳು | ಸರಳ ಲೆಕ್ಕ ಪತ್ರ ಪುಸ್ತಕಗಳನ್ನು ನಿರ್ವಹಿಸುವುದು | ಉದ್ಯಮಿಗಳ ಮೌಖಿಕ ಭೇಟಿ ಹಾಗೂ ಸಂದರ್ಶನ |
| ಎಂಟನೇ ದಿನ | ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಸಹಾಯ ಸೌಲಭ್ಯ | ಬ್ಯಾಂಕ್ ವತಿಯಿಂದ ಸಿಗಬಹುದಾದ ಸಹಾಯಗಳು | ದುಡಿಮೆ ಬಂಡವಾಳದ ಅವಶ್ಯಕತೆ ಹಾಗೂ ಉಪಯೋಗ | ಜಿಲ್ಲಾ ಕೈಗಾರಿಕಾ ಕೇಂದ್ರ ಹಾಗೂ ಸಹಾಯ |
| ಒಂಭತ್ತನೇ ದಿನ | | ಯೋಜನಾ ವರದಿ ತಯಾರಿಸುವುದು | | |
| ಹತ್ತನೇ ದಿನ | ಯೋಜನಾ ವರದಿಯ ಪರಿಶೀಲನೆ | ಪ್ಯಾನಲ್ ಚರ್ಚೆ | ಅಭ್ಯರ್ಥಿಗಳಿಂದ ಕಾರ್ಯಕ್ರಮದ ಮಾಹಿತಿ ಸಂಗ್ರಹಿಸುವಿಕೆ | ಮುಕ್ತಾಯ ಸಮಾರಂಭ |

ಸೂಚನೆ: ಮೇಲೆ ತಿಳಿಸಿದ ಮಾದರಿ ಕಾರ್ಯಕ್ರಮದನ್ವಯ ಹಾಗೂ ಸ್ಥಳೀಯ ಅವಶ್ಯಕತೆಗಳಿಗನುಗುಣವಾಗಿ ಸಂಪನ್ಮೂಲಗಳಿಗೆ ತಕ್ಕಂತೆ ಅಭ್ಯರ್ಥಿಗಳಿಗೆ ಸೂಕ್ತ ಮಾಹಿತಿ ನೀಡತಕ್ಕದ್ದು.



ವ್ಯಾಪಾರ ಮತ್ತು ಸೇವಾ ಉದ್ದಿಮೆಗಳಲ್ಲಿ ಮಹಿಳೆ

ಪಾಲಿಸಬೇಕಾದ ನಿಯಮಗಳು:

1. ಸಂಘ ಸಂಸ್ಥೆಗಳು ತಮ್ಮ ಪರಿಸರಕ್ಕೆ ಅನುಗುಣವಾಗಿ ಬಡತನದ ರೇಖೆ ಅಂಚಿನಲ್ಲಿರುವ ಮಧ್ಯಮವರ್ಗದ ಮಹಿಳೆಯರಿಗೆ ಹಮ್ಮಿಕೊಳ್ಳಬಹುದಾದಂತಹ ಅನೇಕ ಆದಾಯ ಉತ್ಪನ್ನಕರ ಚಟುವಟಿಕೆಗಳ ಮಾಹಿತಿ ನೀಡಬೇಕು.
2. ಪರಿಸರಕ್ಕೆ ತಕ್ಕ ಸಣ್ಣ ಅತಿ ಸಣ್ಣ ಆದಾಯ ಉತ್ಪನ್ನಕರ ಚಟುವಟಿಕೆಗಳ ಸಮಗ್ರ ಪಟ್ಟಿಯನ್ನು ಲಗತ್ತಿಸತಕ್ಕದು.
3. ತಮ್ಮ ಕಾರ್ಯವ್ಯಾಪ್ತಿಯಲ್ಲಿ ಬರುವ ಮಹಿಳೆಯರಿಗೆ ಸ್ವಂತ ಉದ್ಯೋಗ ಕೈಗೊಳ್ಳಲು ಪ್ರೇರೇಪಿಸಿ ಸಹಾಯ ಮಾಡಬೇಕು.
4. ಇ ಡಿ ಪಿ ಯ ಲೆಕ್ಕ ಪತ್ರದ ಪಟ್ಟಿಯನ್ನು Chartered Accountant ಇವರಿಂದ ಪರಿಶೀಲಿಸಿ ಪ್ರಮಾಣೀಕರಿಸಬೇಕು.
5. ಲಗತ್ತಿಸಲಾದ ಪ್ರಶ್ನಾವಳಿಯನ್ನು ಅಭ್ಯರ್ಥಿಗಳಿಂದ ಭರ್ತಿ ಮಾಡಿಸಿ ಉಪಯುಕ್ತತೆಯ ಪ್ರಮಾಣ ಪತ್ರದೊಂದಿಗೆ ನಿಗಮದ ಕಛೇರಿಗೆ ಸಲ್ಲಿಸತಕ್ಕದ್ದು.

## ಇ.ಡಿ.ಪಿ. ನಡೆಸಿದ ನಂತರ ಸಂಸ್ಥೆಯವರು ಲೆಕ್ಕಪತ್ರ ಸಲ್ಲಿಸಬೇಕಾಗಿರುವ ನಮೂನೆ

### ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ನಿಯಮಿತ

1. ಯೋಜನೆಯ ಹೆಸರು : ಮಹಿಳಾ ಉದ್ಯಮಶೀಲತಾ ತರಬೇತಿ
   ಉಪಾತ : ಉ.ಅ.ತ.
2. ಮಂಜೂರಾತಿ ಆದೇಶದ ಸಂಖ್ಯೆ ಮತ್ತು ದಿನಾಂಕ :
3. ಮಂಜೂರಾತಿ ಮಾಡಲಾದ ಮೊತ್ತ :
4. ಭಾಗವಹಿಸಿದ ಅಭ್ಯರ್ಥಿಗಳ ಸಂಖ್ಯೆ (ಕನಿಷ್ಠ 35) :
5. ವೆಚ್ಚದ ಪಟ್ಟಿ

ಎ. ವಿಷಯ ಪರಿಣತರಿಗೆ ಗೌರವಧನ
ಬಿ. ಪಠ್ಯ ವಿವರ ವಿಷಯಗಳ ಸಲಕರಣೆಗಳು
ಸಿ. ಪ್ರಚಾರ ಸಾಮಗ್ರಿಗಳು : ಸಲಕರಣೆಗಳು
ಡಿ. ಉಪಹಾರ
ಇ. ಮುದ್ರಣ ಮತ್ತು ಲೇಖನ ಸಾಮಗ್ರಿಗಳು
ಎಫ್. ಪ್ರಯಾಣದ ವೆಚ್ಚ
ಜಿ. ಆಡಳಿತಾತ್ಮಕ ವೆಚ್ಚ
ಹೆಚ್. ಇತರೆ (ಯಾವ ಉದ್ದೇಶಕ್ಕೆಂದು ನಮೂದಿಸತಕ್ಕದ್ದು) ............ ........................................ ಖರ್ಚು ಮಾಡಲಾದ ಒಟ್ಟು ಮೊತ್ತ ..................................................................

6. ಖರ್ಚಾಗದೆ ಉಳಿದಿರುವ ಮೊತ್ತ (ಉಳಿದಿದ್ದರೆ) .................. (ಡಿ.ಡಿ. ಸಂಖ್ಯೆ) ...................................................................
   ದಿನಾಂಕ:................................. ರಲ್ಲಿ ಲಗತ್ತಿಸಲಾಗಿದೆ.
7. ಉಪಯುಕ್ತತೆಯ ದೃಢೀಕರಣ : ಪತ್ರ ಈ ಕೆಳಗಿನಂತೆ ದೃಢೀಕರಿಸಲಾಗಿದೆ

1. ಮೇಲೆ ನೀಡಲಾದ ವಿವರಗಳನ್ನು ಮೂಲ ರಶೀದಿಯೊಡನೆ ಪರಿಶೀಲಿಸಲಾಗಿದೆ ಮತ್ತು ಸರಿಯಾಗಿದೆ.
2. ದಾಸ್ತಾನು ಸರಕು ಮತ್ತು ನೀಡಿಕೆ : ದಾಖಲೆ ಪುಸ್ತಕಗಳನ್ನು ನಿರ್ವಹಿಸಿರುತ್ತಾರೆ.

8. ಎಲ್ಲಾ ಮೂಲ ರಶೀದಿಗಳನ್ನು ಲಗತ್ತಿಸಲಾಗಿದೆ.

ಅಥವಾ

ಈ ಕಛೇರಿಯಲ್ಲಿ ಎಲ್ಲಾ ರಶೀದಿ ಹಾಗೂ ದಾಖಲೆಗಳನ್ನು ಪ್ರತ್ಯೇಕವಾಗಿ ಇಟ್ಟು ನಿರ್ವಹಿಸಿರುತ್ತಾರೆ.

ಸಹಿ
ಸಂಸ್ಥೆಯ ಮುಖ್ಯಸ್ಥರು : ಸಹಾಯಕ ನಿರ್ದೇಶಕರು, ಮ.ಮ.ಅ.ಇ. ಪ್ರಧಾನ ವ್ಯವಸ್ಥಾಪಕರು, ಜಿ.ಕೈ. ಕೇಂದ್ರ ಯೋಜನಾಧಿಕಾರಿಗಳು, ದೇ.ಪು.ಯೋ.
ಬೆಳಗಾಂ : ಬಿಜಾಪೂರ

ದಿನಾಂಕ:

ಸ್ಥಳ:

## ಪ್ರಶ್ನಾವಳಿ

## ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮ ಕಾರ್ಯಕ್ರಮದ ಮೌಲ್ಯ ನಿರ್ಣಯ

1. ಈ ಕೆಳಕಂಡ ವಿಷಯಕ್ಕೆ ಸಂಬಂಧಿಸಿದಂತೆ ಎಲ್ಲಾ ವಿವರಗಳನ್ನು ಈ ಕಾರ್ಯಕ್ರಮದಡಿಯಲ್ಲಿ ತಿಳಿಸಲಾಗಿದೆ.
   ಪೂರ್ಣವಾಗಿ : ಸಾಮಾನ್ಯವಾಗಿ : ಸಮಾಧಾನಕರವಲ್ಲದ

ಎ. ಕೈಗಾರಿಕೆ : ಅಭಿವೃದ್ಧಿ ಸಂಸ್ಥೆಗಳ ಬಗ್ಗೆ ಮಾಹಿತಿ
ಬಿ. ಯೋಜನೆಯನ್ನು ಗುರುತಿಸುವುದು
ಸಿ. ಯೋಜನೆಯ ವರದಿಯನ್ನು ತಯಾರಿಸುವುದು
ಡಿ. ಕೈಗಾರಿಕೆಗಳಿಗೆ ಆರ್ಥಿಕ ಸಹಾಯ ಪಡೆಯುವುದು
ಇ. ಘಟಕವನ್ನು ವ್ಯವಸ್ಥಿತ ರೀತಿಯಲ್ಲಿ ನಡೆಸುವುದು

2. ಕಾರ್ಯಕ್ರಮಕ್ಕೆ ಆಹ್ವಾನಿತರಾದ ಪರಿಣಿತರ ಜ್ಞಾನ ವಿಧಾನ ಮತ್ತು ವಿಷಯ ಮಂಡಿಸುವಿಕೆಯ ಬಗ್ಗೆ ಅವರ ಸಾಮರ್ಥ್ಯದ ಪ್ರಮಾಣವನ್ನು, ಶಕ್ತಿಯನ್ನು ಯಾವ ರೀತಿ ಪರಿಗಣಿಸುತ್ತೀರಿ.
   ಅತ್ಯುತ್ತಮ : ಉತ್ತಮ : ತೃಪ್ತಿಕರ : ಸಮಾಧಾನಕರ : ಅತೃಪ್ತಿಕರ

3. ತರಬೇತಿಗೆ ಸಂಬಂಧಿಸಿದಂತೆ ನಿಮಗೆ ನೀಡಿರುವ ಮಾಹಿತಿ : ವಿಷಯದ ಬಗ್ಗೆ ನಿಮ್ಮ ಅಭಿಪ್ರಾಯ ತಿಳಿಸಿ.
   ಅತ್ಯುತ್ತಮ : ಉತ್ತಮ : ಸಾಮಾನ್ಯ : ಅತೃಪ್ತಿಕರ

4. ತರಬೇತಿ ಅವಧಿಯಲ್ಲಿ ಕಲಿಸಿದ ವಿಷಯಗಳಲ್ಲಿ ತಮಗೆ ನೀಡಲಾಗಿರುವ ವಿಷಯಗಳಲ್ಲಿ ಯಾವುದು ನಿಮಗೆ ಉಪಯುಕ್ತವಾದುದ್ದೆಂದು ಹಾಗೂ ಸರಿಯಾಗಿ ಮನದಟ್ಟಾಗದ ವಿಷಯಗಳೆಂದು ತಿಳಿಯುತ್ತೀರಿ.
   (ಅ) (ಆ)
   (ಇ) (ಈ)

5. ತರಬೇತಿ ಅವಧಿಯಲ್ಲಿ ಕಲಿಸಿದ ವಿಷಯಗಳಲ್ಲಿ ತಮಗೆ ನೀಡಲಾಗಿರುವ ವಿಷಯಗಳಲ್ಲಿ ಯಾವುದು ನಿಮಗೆ ಉಪಯುಕ್ತವಾದುದ್ದೆಂದು ಹಾಗೂ ಸರಿಯಾಗಿ ಮನದಟ್ಟಾಗದ ವಿಷಗಳಲ್ಲವೆಂದು ತಿಳಿಯುತ್ತೀರಿ.
   (ಅ) (ಆ)
   (ಇ) (ಈ)

6. ಉತ್ಪಾದನಾ ಘಟಕಗಳಿಗೆ ನೀಡಿದ ಭೇಟಿಯು ಹೆಚ್ಚು ಉಪಯುಕ್ತವಾಗಿತ್ತು : ಉಪಯುಕ್ತವಾಗಿರಲಿಲ್ಲ.

7. ತರಬೇತಿದಾರರು ನಿರ್ವಹಿಸಿದ ಪಾತ್ರ ನೀಡಿದ ಸಹಾಯ ಮತ್ತು ಸಹಕಾರಗಳು ಅತ್ಯುತ್ತಮವಾಗಿತ್ತು : ಉತ್ತಮ : ಸಮಾಧಾನಕರವಾಗಿತ್ತು.

8. ನೀಡಲಾದ ತರಬೇತಿಯಿಂದ ಸ್ವ ಉದ್ಯೋಗ ಕೈಗೊಳ್ಳುವ ಘಟಕವನ್ನು ನಡೆಸುವಲ್ಲಿ ಮತ್ತು ನಿಮ್ಮ ಭವಿಷ್ಯ ರೂಪಿಸಿಕೊಳ್ಳಲು ಯಾವ ರೀತಿ ಅನುಕೂಲವಾಗುತ್ತದೆ.
   ಅತಿ ಹೆಚ್ಚಾಗಿ : ಹೆಚ್ಚಾಗಿ : ಯಾವ ರೀತಿಯಲ್ಲೂ ಅಲ್ಲಾ

9. ಈ ಕಾರ್ಯಕ್ರಮವನ್ನು ಅಭಿವೃದ್ಧಿ ಪಡಿಸುವಲ್ಲಿ ನಿಮ್ಮ ಸಲಹೆಗಳು
   (ಅ) (ಆ)
   (ಇ) (ಈ)

10. ಕಾರ್ಯಕ್ರಮವನ್ನು ಅಭಿವೃದ್ಧಿ ಪಡಿಸುವುದಕ್ಕಾಗಿ ನೀವು ನಮ್ಮ ಗಮನಕ್ಕೆ ತರಲಿಚ್ಚಿಸುವ ಇತರೆ ಅಂಶಗಳು : ವಿಷಯಗಳನ್ನು ತಿಳಿಸಿರಿ.

ಸಂಬಂಧಪಟ್ಟ ಸಾಲಿಗೆ ನಿಗಧಿಪಡಿಸಿದ ಗುರಿ ಪ್ರಕಾರ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುವುದು.

**ಸಂಪರ್ಕ ಕಛೇರಿ:**

1. ಸಂಬಂಧಪಟ್ಟ ಜಿಲ್ಲೆಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಹಾಯಕ ನಿರ್ದೇಶಕರು.
2. ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ಕೈಗಾರಿಕೆ ಕೇಂದ್ರ ಪ್ರಧಾನ ವ್ಯವಸ್ಥಾಪಕರು.
3. ಬೆಂಗಳೂರು ನಗರದ ವ್ಯಾಪ್ತಿಯಲ್ಲಿನ ಸಂಸ್ಥೆಗಳು ನೇರವಾಗಿ ಮಹಿಳಾ ಅಭಿವೃದ್ಧಿ ನಿಗಮದ ಪ್ರಧಾನ ಕಛೇರಿಯನ್ನು ಸಂಪರ್ಕಿಸುವುದು.

## 8. ಕಾರ್ಯಾಗಾರ : ವಿಚಾರ ಗೋಷ್ಠಿಗಳು:

ಮಹಿಳೆಯರ ಸರ್ವಾಂಗೀಣ ಅಭಿವೃದ್ಧಿಗೆ ಬೆಳಕು ಚೆಲ್ಲುವ. ಮಹಿಳೆಯರ ಸಾಮಾಜಿಕ, ಆರ್ಥಿಕ, ರಾಜಕೀಯ, ಕಾನೂನು, ಆರೋಗ್ಯ, ಶಿಕ್ಷಣ ಇನ್ನಿತರೆ ವಿಷಯಗಳ ಬಗ್ಗೆ ವಿಮರ್ಶಿಸಿ ಸಮಾಲೋಚಿಸಿ ನಿರ್ಣಯಗಳನ್ನು ಕೈಗೊಳ್ಳಬಹುದಾದಂತಹ ಹಾಗೂ ನಿರ್ದಿಷ್ಟ ಗುರಿ ಹೊಂದಿರುವ ಕಾರ್ಯಗಾರ : ವಿಚಾರ ಗೋಷ್ಠಿ ಪ್ರಸ್ತಾವನೆಗಳನ್ನು ಮಾತ್ರ ಪರಿಶೀಲಿಸಿ ಈ ಯೋಜನೆಯಡಿ ಯಲ್ಲಿ ಪರಿಗಣಿಸಲಾಗುವುದು.

ಈ ಯೋಜನೆಯಡಿ ಅರ್ಜಿ ಸಲ್ಲಿಸುವವರು ಕಾರ್ಯಾಗಾರ : ವಿಚಾರ ಗೋಷ್ಠಿಗಳನ್ನು ನಡೆಸುವ ಕಾರಣ, ಉದ್ದೇಶ, ಕಾರ್ಯ ವಿಧಾನ ತಿಳಿಸಬೇಕು. ವಿಶ್ವವಿದ್ಯಾನಿಲಯಗಳು, ಸಂಶೋಧನಾ ಕೇಂದ್ರಗಳು, ಮಹಿಳೆಯರ ಅಭಿವೃದ್ಧಿಗಾಗಿ ವ್ಯಾಪಕವಾಗಿ ಕೆಲಸ ನಿರ್ವಹಿಸುತ್ತಿರುವ ಸಂಸ್ಥೆಗಳಿಗೆ ಆದ್ಯತೆ ನೀಡಲಾಗುವುದು. ಸಂಯೋಜಕರು ಕಾರ್ಯಗಾರ, ವಿಚಾರಗೋಷ್ಠಿಗಳನ್ನು ಏರ್ಪಡಿಸಲು ಸೌಲಭ್ಯಗಳನ್ನು ಹೊಂದಿರಬೇಕು. ನಿಗಮವು ಕಾರ್ಯಾಗಾರ : ವಿಚಾರಗೋಷ್ಠಿಯ ಒಟ್ಟು ವೆಚ್ಚದ ಶೇಕಡಾ 50ರಷ್ಟು ಸಹಾಯಧನವಾಗಿ ಒದಗಿಸುತ್ತದೆ.

ಸಂಬಂಧಪಟ್ಟ ಸಾಲಿಗೆ ನಿಗಧಿಪಡಿಸಿದ ಗುರಿ ಪ್ರಕಾರ ಕಾರ್ಯಕ್ರಮ ವನ್ನು ಅನುಷ್ಠಾನಗೊಳಿಸಲಾಗುವುದು.

**ಸಂಪರ್ಕ ಕಛೇರಿ:**

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, ಪ್ರಧಾನ ಕಛೇರಿ, ಬೆಂಗಳೂರು.

## 9. ಮಾರಾಟಕ್ಕೆ ಅನುವಾಗುವ ಕಾರ್ಯಕ್ರಮಗಳು:

### ಅ. ಕಲ್ಯಾಣಿ ಮಾರುಕಟ್ಟೆ ಸಂಕೀರ್ಣ:

ಬೆಂಗಳೂರು ನಗರದ ಕಸ್ತೂರಬಾ ರಸ್ತೆಯಲ್ಲಿರುವ ಕಲ್ಯಾಣಿ ಮಾರಾಟ ಮಳಿಗೆಯಲ್ಲಿ ಮಹಿಳಾ ಉದ್ಯಮಿಗಳು, ಸಂಸ್ಥೆಗಳು ಉತ್ಪನ್ನ ಮಾಡುವ ವಸ್ತುಗಳನ್ನು ಮಾರಾಟ ಮಾಡಲಾಗುತ್ತದೆ. ಉತ್ತಮ ಗುಣಮಟ್ಟದ ಗೃಹೋಪಯೋಗಿ, ಕರಕುಶಲ ವಸ್ತುಗಳು



ಉದ್ಯಮಿಗಳಿಗೆ ನಿಗಮದಿಂದ ಮಾರಾಟದ ವ್ಯವಸ್ಥೆ

ಹಾಗೂ ಉಡುಪುಗಳ ಹಾಗೂ ಇತರೆ ವಸ್ತುಗಳಲ್ಲಿ ಈ ಮಾರಾಟ ಮಳಿಗೆ ಮುಖಾಂತರ ಮಾರಾಟ ಮಾಡಲ್ಪಡುತ್ತಿದೆ.

**ಸಂಪರ್ಕ ಕಛೇರಿ:**

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, ಪ್ರಧಾನ ಕಛೇರಿ, ಬೆಂಗಳೂರು..

### ಆ. ವಸ್ತುಪ್ರದರ್ಶನಗಳು

ನಿಗಮವು ಮಹಿಳಾ ಉದ್ಯಮಿಗಳ, ಸಂಘಗಳ ಹಾಗೂ ಸಂಸ್ಥೆಗಳ ಮಾರಾಟ ಸಾಮರ್ಥ್ಯವನ್ನು ಬಲಪಡಿಸಲು ಬೆಂಗಳೂರು ಮತ್ತು ರಾಜ್ಯದ ಎಲ್ಲಾ ಪ್ರಮುಖ ನಗರಗಳಲ್ಲಿ ವಸ್ತುಪ್ರದರ್ಶನಗಳನ್ನು ಏರ್ಪಡಿಸುತ್ತಿದೆ. ಇಷ್ಟೇ ಅಲ್ಲದೆ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಪ್ರತಿ ವರ್ಷ ಮಾರ್ಚ್ ಮಾಹೆಯಲ್ಲಿ ಬೆಂಗಳೂರು ನಗರದಲ್ಲಿ ರಾಜ್ಯದ ಎಲ್ಲಾ ಭಾಗದ ಮಹಿಳಾ ಉದ್ಯಮಿಗಳಿಗೆ ಸಂಸ್ಥೆಗಳಿಗೆ ಅವರುಗಳು ತಯಾರಿಸಲ್ಪಟ್ಟಿರುವ ವಸ್ತುಗಳ ಗುಣಮಟ್ಟ ಮತ್ತು ಉತ್ಪಾದನಾ ಸಾಮರ್ಥ್ಯವನ್ನು ಆಧರಿಸಿ ವಸ್ತುಪ್ರದರ್ಶನದಲ್ಲಿ ಭಾಗವಹಿಸಲು ಅವಕಾಶ ನೀಡಲಾಗುವುದು.

ಮಾರುಕಟ್ಟೆ ಸಹಾಯ ಕೋರುವ ಮಹಿಳಾ ಉದ್ಯಮಿಗಳು ಹಾಗೂ ಸಂಸ್ಥೆಗಳು ನಿಗಮದ ಅಭಿವೃದ್ಧಿ ವ್ಯವಸ್ಥಾಪಕರಲ್ಲಿ ತಮ್ಮ ನೋಂದಾವಣಿಯನ್ನು ಮಾಡಿಕೊಳ್ಳಲು ಕೋರಲಾಗಿದೆ.

ಸಂಬಂಧಪಟ್ಟ ಸಾಲಿಗೆ ನಿಗಧಿಪಡಿಸಿದ ಗುರಿ ಪ್ರಕಾರ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುವುದು.

**ಸಂಪರ್ಕ ಕಛೇರಿ:**

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ,
ಪ್ರಧಾನ ಕಛೇರಿ, ಬೆಂಗಳೂರು.

### ಇ. ವಾಣಿಜ್ಯ ವಸ್ತುಪ್ರದರ್ಶನ, ಮಾರಾಟ ಮೇಳಗಳಲ್ಲಿ ಭಾಗವಹಿಸಲು ಇಚ್ಛಿಸುವ ಸ್ವಯಂ ಸೇವಾ ಸಂಸ್ಥೆಗಳಿಗೆ ಧನ ಸಹಾಯ:

ಬೆಂಗಳೂರು ನಗರ ಅಥವಾ ಇತರೆ ಸ್ಥಳಗಳಲ್ಲಿ ಕಾಲಕಾಲಕ್ಕೆ ವ್ಯವಸ್ಥೆಗೊಳಿಸುವ ಖಾಸಗೀ ಅಥವಾ ಸರ್ಕಾರೀ ಬೃಹತ್ ವಸ್ತುಪ್ರದರ್ಶನ, ಮಾರಾಟ ಮೇಳಗಳಲ್ಲಿ (ದಸರಾ ವಸ್ತುಪ್ರದರ್ಶನ ಪ್ರಾಧಿಕಾರ, ಹ್ಯಾಂಡ್‌ಲೂಮ್ ಫೇರ್, ನ್ಯಾಷನಲ್ ಕನ್ಸ್ಯೂಮರ್ಸ್ ಫೇರ್, ಇತರೆ) ಭಾಗವಹಿಸಲು ಇಚ್ಛಿಸುವ ಸ್ವಯಂ ಸೇವಾ ಸಂಸ್ಥೆಗಳಿಗೆ ಈ ಯೋಜನೆಯನ್ನು ರೂಪುಗೊಳಿಸಲಾಗಿದೆ.

ಈ ಯೋಜನೆಯ ವಿವರಗಳು ಕೆಳಕಂಡಂತಿದೆ:

ಕೆಲವು ಮಹಿಳಾ ಸ್ವಯಂ ಸೇವಾ ಸಂಸ್ಥೆಗಳು : ಮಂಡಳಿಗಳು : ಸಂಘಗಳು ಉತ್ಪನ್ನಗಳನ್ನು ಮಾರುಕಟ್ಟೆ ಮಾಡುವ ಬಗ್ಗೆ ಈಗಾಗಲೇ ಅನುಭವ ಹೊಂದಿರುತ್ತಾರೆ. ಮಾರುಕಟ್ಟೆಗಾಗಿಯೇ ಸಿಬ್ಬಂದಿ, ಸ್ಥಳವಕಾಶ, ವಾಹನ ಇತರೆ ಸೌಲಭ್ಯಗಳನ್ನು ಹೊಂದಿರಲೂಬಹುದು. ಈ ರೀತಿಯಲ್ಲಿ 5 ವರ್ಷಗಳು ಮಾರುಕಟ್ಟೆ ಅನುಭವ ಹೊಂದಿರುವ ಸಂಸ್ಥೆಗಳು ಸರ್ಕಾರಿ ಅಥವಾ ಖಾಸಗೀ ವಸ್ತು ಪ್ರದರ್ಶನಗಳಲ್ಲಿ ಭಾಗವಹಿಸುವಿಕೆಗಾಗಿ ಶೇ. 50ರಷ್ಟು ಗರಿಷ್ಠ ರೂ. 25000/- ರವರೆವಿಗೆ ನೆಲಬಾಡಿಗೆಯನ್ನು ಸಹಾಯಧನವಾಗಿ ನೀಡಲಾಗುವುದು. ಈ ಯೋಜನೆಯಡಿಯಲ್ಲಿ ಮಂಜೂರಾತಿ ಕೋರುವ ಸಂಸ್ಥೆಯು ಉದ್ದೇಶಿತ ವಸ್ತುಪ್ರದರ್ಶನದಲ್ಲಿ ಕನಿಷ್ಠ 10 ಇತರೆ ಉದ್ಯಮಿಗಳ ಅಥವಾ ಸಂಸ್ಥೆಗಳ ಉತ್ಪನ್ನಗಳನ್ನು ಮಾರಾಟ ಮಾಡಲು ಸಹಾಯ ನೀಡಬೇಕು. ವಸ್ತುಪ್ರದರ್ಶನದಲ್ಲಿ ಮಾರಾಟವಾಗುವ ಒಟ್ಟು ಮೌಲ್ಯದ ಶೇಕಡಾ 5 ರಷ್ಟನ್ನು ರಾಯಲ್ಟಿ ಅಥವಾ ಗೌರವಧನವಾಗಿ ನಿಗಮಕ್ಕೆ ತುಂಬಬೇಕು. ಈ ಯೋಜನೆಯಡಿಯಲ್ಲಿ ಪ್ರಸ್ತಾವನೆಗಳನ್ನು ಉದ್ದೇಶಿತ ವಸ್ತುಪ್ರದರ್ಶನ ಪ್ರಾರಂಭವಾಗುವ ಒಂದು ತಿಂಗಳ ಮುಂಚಿತವಾಗಿ ಸಲ್ಲಿಸಬೇಕು.

ಸಂಬಂಧಪಟ್ಟ ಸಾಲಿಗೆ ನಿಗಧಿಪಡಿಸಿದ ಗುರಿ ಪ್ರಕಾರ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುವುದು.

**ಸಂಪರ್ಕ ಕಛೇರಿ:**

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, ಪ್ರಧಾನ ಕಛೇರಿ, ಬೆಂಗಳೂರು.

## 10. ವಿನ್ಯಾಸ ವಿಭಾಗ:

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಲ್ಲಿ ಪ್ರಸ್ತುತ ವಿನ್ಯಾಸ ಶೈಲಿಗಳ ಬಗ್ಗೆ ಸಲಹೆ ಒದಗಿಸಲು ನೂತನ ವಿನ್ಯಾಸ ವಿಭಾಗವನ್ನು ಸ್ಥಾಪಿಸಲಾಗಿರುತ್ತದೆ. ನಿಗಮದ ವಿನ್ಯಾಸ ಸಲಹೆಗಾರರು, ಮಹಿಳೆಯರು ಮತ್ತು ಸಂಘ ಸಂಸ್ಥೆಗಳು ಉತ್ಪನ್ನ ಮಾಡುವಂತಹ ವಸ್ತುಗಳ ಬಣ್ಣ, ಗುಣಮಟ್ಟ, ಆಕಾರ ನಿಗಧಿಸಬೇಕಾದ ಬೆಲೆ ಮಾರಾಟ ವಿಧಾನಗಳು ಮತ್ತು ಇತರೆ ವಿಷಯಗಳ ಬಗ್ಗೆ ಮಾಹಿತಿ ನೀಡುತ್ತಾರೆ. ಈ ಸೌಲಭ್ಯವನ್ನು ಎಲ್ಲಾ ಮಹಿಳಾ ಸಂಘ ಸಂಸ್ಥೆಗಳು ಉತ್ಪಾದನಾ ಘಟಕಗಳು ತರಬೇತಿ ಸಂಸ್ಥೆಗಳು ಮಹಿಳಾ ಉದ್ಯಮಿಗಳು ಉಪಯೋಗಿಸಿಕೊಳ್ಳಬಹುದಾಗಿದೆ.

ಇಷ್ಟೇ ಅಲ್ಲದೇ ನಿಗಮದ ವಿನ್ಯಾಸ ವಿಭಾಗವು ಆಗಿಂದಾಗ್ಗೆ ಕಾರ್ಯಾಗಾರಗಳನ್ನು ವಿಚಾರಗೋಷ್ಠಿಗಳನ್ನು ಮತ್ತು ನಿರ್ದಿಷ್ಟ ಕಸುಬುಗಳಲ್ಲಿ ಉದಾಹರಣೆಗೆ ಹೊಲಿಗೆ, ಯಂತ್ರ, ಕೈಕಸೂತಿ, ಉಣ್ಣೆ, ಹಣಿಗೆ ಮತ್ತು ಇತರ ಅನೇಕ ಕೌಶಲ್ಯ ಹೆಚ್ಚಿಸುವ ಅಲ್ಪಾವಧಿ ತರಬೇತಿ ಕಾರ್ಯಕ್ರಮಗಳನ್ನು ನಡೆಸುತ್ತದೆ.

ಸಂಬಂಧಪಟ್ಟ ಸಾಲಿಗೆ ನಿಗಧಿಪಡಿಸಿದ ಗುರಿ ಪ್ರಕಾರ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುವುದು.

### ಸಂಪರ್ಕ ಕಛೇರಿ:

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, ಪ್ರಧಾನ ಕಛೇರಿ, ಬೆಂಗಳೂರು.

## 11. ವಿದ್ಯಾವಿಕಾಸ ಯೋಜನೆ:

### ಉದ್ದೇಶ:

1988-89ರಲ್ಲಿ ರಾಜ್ಯ ಸರ್ಕಾರವು ಜಾರಿಗೆ ತಂದಿದ್ದ ವಿದ್ಯಾವಿಕಾಸ ಯೋಜನೆಯ ಪ್ರಕಾರ ಸರ್ಕಾರವು ಶಾಲಾ ಸಮವಸ್ತ್ರ ಹೊಲಿಯುವ ಶೇ. 50ರಷ್ಟು ಕೆಲಸವನ್ನು ಕ.ರಾ.ಮ.ಅ.ನಿ. (ಕರ್ಮಣ)ಕ್ಕೆ ವಹಿಸುತ್ತಿತ್ತು. ನಿಗಮವು ಹೊಲಿಗೆ ತರಬೇತಿ ಪಡೆದಿರುವ ಮಹಿಳೆಯರಿಗೆ ಮಹಿಳಾ ಮಂಡಳಿ : ಸಂಸ್ಥೆಗಳ ಮುಖಾಂತರ ವಿದ್ಯಾವಿಕಾಸ ಯೋಜನೆಯಡಿ ಹೊಲಿಗೆ ಕೆಲಸ ಒದಗಿಸಿ ಸಹಾಯ ಕಲ್ಪಿಸುತ್ತಿತ್ತು. 1994-95ರವರೆವಿಗೆ ವಿದ್ಯಾವಿಕಾಸ ಯೋಜನೆಯ ಸಮವಸ್ತ್ರಗಳನ್ನು ಹೊಲಿಸುವ ಕಾರ್ಯಕ್ರಮವು ಜಾರಿಯಲ್ಲಿದ್ದು, ತದನಂತರ ನಿಲ್ಲಿಸಲ್ಪಟ್ಟಿರುತ್ತದೆ.

### ಅರ್ಹತೆ:

ಈ ಕೆಳಗಿನ ನಿಬಂಧನೆಗಳಿಗೆ ಬದ್ಧವಾಗಿರುವ ಹಾಗೂ ಮಹಿಳೆಯರ ಅಭಿವೃದ್ಧಿಗೋಸ್ಕರ ಕೆಲಸ ಮಾಡುತ್ತಿರುವ ಮಹಿಳಾ ಮಂಡಳಿಗಳು ಕೂಟಗಳು ಸ್ವಯಂ ಸೇವಾ ಸಂಸ್ಥೆಗಳು ಮತ್ತು ಇತರೆ ಸಂಘಗಳಿಗೆ ಈ ಯೋಜನೆಯಡಿಯಲ್ಲಿ ಸಮವಸ್ತ್ರ ಹೊಲಿಗೆ ಕೆಲಸ ನೀಡಲಾಗುತ್ತಿತ್ತು.

1. ಸಂಘವು ಹೊಲಿಗೆ ಚಟುವಟಿಕೆಯನ್ನು ಕೈಗೊಳ್ಳಲು ಅವಶ್ಯಕ ಸ್ಥಳಾವಕಾಶ ಹೊಂದಿರಬೇಕು.
2. ಸಂಘವು ಹೊಲಿಗೆ ಚಟುವಟಿಕೆಯನ್ನು ಜಾರಿಗೊಳಿಸಲು ಅವಶ್ಯಕ ಯಂತ್ರಗಳನ್ನು ಹೊಂದಿರಬೇಕು.
3. ಸಂಘವು ತನ್ನ ಪ್ರದೇಶದಲ್ಲಿನ ಹೊಲಿಗೆ ತರಬೇತಿ ಪಡೆದ ಮಹಿಳೆಯರಿಗೆ ಹೊಲಿಗೆ ಕೆಲಸ ವಹಿಸಬೇಕು.
4. ಸಂಘವು ಸಮವಸ್ತ್ರಗಳನ್ನು ಅಳತೆಯಂತೆ ಸರಿಯಾದ ಗುಣಮಟ್ಟದಲ್ಲಿ ಹೊಲಿಯಬೇಕು ಮತ್ತು ವಸ್ತ್ರಗಳನ್ನು ಸಮಯಕ್ಕೆ ಸರಿಯಾಗಿ ಪೂರೈಸಬೇಕು.

ಮಹಿಳಾ ಸಂಘ ಸಂಸ್ಥೆಯು ಹೊಲಿಗೆ ಕೆಲಸವನ್ನು ಪೂರೈಸಿ ಸಮವಸ್ತ್ರಗಳನ್ನು ಸಂಬಂಧಿಸಿದ ತಾಲ್ಲೂಕಿನ ಸಹಾಯಕ ಶಿಕ್ಷಣಾಧಿಕಾರಿಗಳಿಗೆ ತಮ್ಮದೇ ಸಾಗಾಣಿಕೆ ವ್ಯವಸ್ಥೆ ಮೂಲಕ ತಲುಪಿಸಬೇಕಾಗಿತ್ತು. ಸಮವಸ್ತ್ರಗಳನ್ನು ತಲುಪಿಸಿದ ಪ್ರಮಾಣಕ್ಕೆ ಸ್ವೀಕೃತಿಗಳನ್ನು ಪಡೆದು ಸಂಬಂಧಪಟ್ಟ ಜಿಲ್ಲೆಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಾಯಕ ನಿರ್ದೇಶಕರವರ ಕಛೇರಿಗೆ ಸಲ್ಲಿಸತಿತ್ತು. ಒಟ್ಟು ಹೊಲಿಗೆ ದರದ ಶೇ. 75ರಷ್ಟು ಮೊತ್ತವನ್ನು ಸಹಾಯಕ ನಿರ್ದೇಶಕರು, ಮಹಿಳಾ ಅಭಿವೃದ್ಧಿ ನಿಗಮದ ಕೇಂದ್ರ ಕಛೇರಿಯಿಂದ ಪಡೆದು ಸಂಬಂಧಿಸಿದವರಿಗೆ ವಿತರಣೆ ಮಾಡುತ್ತಿದ್ದರು. ಉಳಿಕೆ ಶೇ. 25ರಷ್ಟು ಹಣವು ಸಂಪೂರ್ಣ ಹೊಲಿಗೆ ಬಿಲ್ಲು ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರವರಿಂದ ರಾಜ್ಯ ಸರ್ಕಾರದ ಆಯವ್ಯಯದಿಂದ ಮಂಜೂರಾತಿ ಆದ ನಂತರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಹಾಯಕ ನಿರ್ದೇಶಕರ ಮುಖಾಂತರವೇ ವಿತರಿಸಲಾಗುತ್ತಿತ್ತು.

ಸರ್ಕಾರದಿಂದ ಕಾಲಕಾಲಕ್ಕೆ ಅಳತೆವಾರು ನಿಗಧಿಪಡಿಸಿರುವ ಸಮವಸ್ತ್ರದ ಹೊಲಿಗೆ ದರದ ಪ್ರಕಾರ ಮಹಿಳಾ ಮಂಡಳಿಗಳಿಗೆ : ಸಂಸ್ಥೆಗಳಿಗೆ ಹೊಲಿಗೆ ಕೂಲಿಯನ್ನು ನೀಡಲಾಗುತ್ತಿತ್ತು. ಸಂಬಂಧಪಟ್ಟ ಜಿಲ್ಲೆಯ ಹೊಲಿಗೆ ಕೆಲಸವನ್ನು ಅದೇ ಜಿಲ್ಲೆಯಲ್ಲಿನ ಮಹಿಳಾ ಮಂಡಳಿ : ಸಂಸ್ಥೆಗಳ ಮೂಲಕ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಾಯಕ ನಿರ್ದೇಶಕರು ಮಾಡಿಸುತ್ತಿದ್ದರು. ಹೊಲಿಯಬೇಕಾಗಿರುವ ಬಟ್ಟೆ ಹಂಚಿಕೆ ಅಧಿಕಾರವನ್ನು ಸಹಾಯಕ ನಿರ್ದೇಶಕರಿಗೆ ನೀಡಲಾಗಿತ್ತು.

## 12. ದೇವದಾಸಿ ಪುನರ್ವಸತಿ ಕಾರ್ಯಕ್ರಮ:

ಬೆಳಗಾಂ ಮತ್ತು ಬಿಜಾಪುರ ಜಿಲ್ಲೆಗಳಲ್ಲಿನ ದೇವದಾಸಿಯರ ಪುನರ್ವಸತಿ ಕಾರ್ಯವನ್ನು ನಿಗಮವು ಜಾರಿಗೊಳಿಸುತ್ತಿದೆ. ದೇವದಾಸಿಯರು ಆರ್ಥಿಕ ಚಟುವಟಿಕೆಗಳ ಮೂಲಕ ಸ್ವಾವಲಂಬಿಗಳಾಗಲು, ತರಬೇತಿಯ ಮೂಲಕ ಉತ್ಪಾದನಾ ಕೌಶಲ್ಯ ಹೆಚ್ಚಿಸಿಕೊಳ್ಳಲು ಮತ್ತು ಹಾಗೆಯೇ ಅವರ ಆರೋಗ್ಯದ ಬಗ್ಗೆ ಮುತುವರ್ಜಿ ಮತ್ತು ಅವರ ಮಕ್ಕಳಿಗೆ ಶೈಕ್ಷಣಿಕ ಸೌಲಭ್ಯ ಹೀಗೆ ಅವರನ್ನು ಎಲ್ಲಾ ದೃಷ್ಟಿಯಿಂದ ಅಭಿವೃದ್ಧಿಗೊಳಿಸುವಲ್ಲಿ ಪ್ರಯತ್ನಿಸಲಾಗುತ್ತಿದೆ.

ಸದರಿ ಜಿಲ್ಲೆಗಳಲ್ಲಿ ಈ ಕೆಳಗಿನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

**ನೇಯ್ಗೆ ಕಾರ್ಯಕ್ರಮ:** ಕರ್ನಾಟಕ ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮದ ಸಹಕಾರದೊಂದಿಗೆ ನೇಯ್ಗೆ ಕಾರ್ಯಕ್ರಮವನ್ನು ವ್ಯಾಪಕವಾಗಿ ಜಾರಿಗೊಳಿಸಲಾಗುತ್ತಿದೆ. ತರಬೇತಿ ಪಡೆದ ದೇವದಾಸಿಯರಿಗೆ ಕೈಮಗ್ಗ ನೇಯ್ಗೆ ಯೋಜನೆಯಡಿಯಲ್ಲಿ ಅಂದಾಜು 15000-25000 ರೂ.ಗಳಲ್ಲಿ ವಸತಿ ಕಾರ್ಯಾಗಾರಗಳನ್ನು ಕಲ್ಪಿಸಿಕೊಡಲಾಗುವುದು. ಹಾಗೂ ಶೇಕಡ 50ರ ಸಹಾಯಧನದಲ್ಲಿ ಮಗ್ಗ ಮತ್ತು ಉಪಕರಣಗಳನ್ನು ನೀಡಲಾಗುವುದು. ಕರ್ನಾಟಕ ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮವು ನಿರಂತರವಾಗಿ ಕಚ್ಚಾವಸ್ತು ಪೂರೈಸಲು ಮತ್ತು ಉತ್ಪಾದನೆಗಳಿಗೆ ಮಾರುಕಟ್ಟೆ ಒದಗಿಸುವ ಜವಾಬ್ದಾರಿಯನ್ನು ತೆಗೆದುಕೊಂಡಿರುತ್ತದೆ.

ಇಷ್ಟೇ ಅಲ್ಲದೇ ತಮ್ಮ ಜೀವನದ ನಿರ್ವಹಣೆಗೆ ಸಹಾಯಕವಾಗುವಂತಹ ಉತ್ಪಾದನೆಯಲ್ಲಿ ತೊಡಗಲು ದೇವದಾಸಿಯರಿಗೆ 'ತರಬೇತಿ ಮತ್ತು ಉತ್ಪಾದನಾ ಕೇಂದ್ರ' ಸ್ಥಾಪಿಸಲಾಗುತ್ತಿದೆ. ಈಗಾಗಲೇ ಬೆಳಗಾಂ ಮತ್ತು ಬಿಜಾಪುರ ಜಿಲ್ಲೆಯಲ್ಲಿ ದೇವದಾಸಿಯರಿಗೆ ಸೀಮೆಸುಣ್ಣ, ಚಪ್ಪಲಿ ತಯಾರಿಕೆ, ಸೋಪು, ಕರ್ಪೂರ, ಊದುಕಡ್ಡಿ, ಸಿದ್ಧ ಉಡುಪುಗಳು ಮತ್ತಿತರೆ ವಸ್ತುಗಳಲ್ಲಿ ಉತ್ಪಾದನಾ ಕೇಂದ್ರಗಳು ಕೆಲಸ ನಿರ್ವಹಿಸುತ್ತಿರುತ್ತವೆ. ಸೋಪು ಮತ್ತು ಸೀಮೆಸುಣ್ಣ ಸ್ಥಳೀಯವಾಗಿ ಜಿಲ್ಲಾ ಪಂಚಾಯತ್ ಮುಖಾಂತರ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಇಲಾಖೆಗಳಿಗೆ ಮಾರುಕಟ್ಟೆ ಮಾಡಲಾಗುತ್ತಿವೆ. ಚಪ್ಪಲಿ ಹಾಗೂ ಇನ್ನಿತರೆ ವಸ್ತುಗಳನ್ನು ಉತ್ಪಾದಿಸುತ್ತಿರುವ ಘಟಕಗಳೇ ಸ್ಥಳೀಯವಾಗಿ ಮಾರುಕಟ್ಟೆ ಮಾಡುತ್ತಿವೆ.

ಆದಾಯ ಉತ್ಪನ್ನಕರ ಯೋಜನೆಗಳಾದ ಹೈನುಗಾರಿಕೆ, ಕೋಳಿ ಸಾಕಾಣಿಕೆ, ಪೆಟ್ಟಿ ಅಂಗಡಿ, ವ್ಯಾಪಾರ, ಹೊಲಿಗೆ ಇತ್ಯಾದಿಗಳನ್ನು ಪ್ರಾರಂಭಿಸಲು ದೇವದಾಸಿ ಮಹಿಳೆಯರಿಗೆ ಬ್ಯಾಂಕ್ ಅಥವಾ ಇತರೆ ಹಣಕಾಸು ಸಂಸ್ಥೆಗಳ ಮುಖಾಂತರ ಶೇ. 60ರಷ್ಟು ಸಹಾಯಧನದಲ್ಲಿ ಸಾಲ ಒದಗಿಸಲಾಗುತ್ತಿದೆ. ದೇವದಾಸಿಯರನ್ನು ವ್ಯವಸ್ಥಿತವಾಗಿ ಆರೋಗ್ಯ ತಪಾಸಣೆಗೆ ಗುರಿಪಡಿಸುವ ಹಾಗೂ ಚಿಕಿತ್ಸೆ ನೀಡುವ ಕಾರ್ಯದಲ್ಲಿ ಆರೋಗ್ಯ ಇಲಾಖೆಯ ಸಹಾಯದೊಂದಿಗೆ ಆರೋಗ್ಯ ಶಿಬಿರಗಳನ್ನು ನಡೆಸಲಾಗುತ್ತಿದೆ.

ಈ ದೇವದಾಸಿ ಪದ್ಧತಿಯು ಅತಿ ಪುರಾತನ ಕಾಲದಿಂದ ಆಚರಿಸುತ್ತಿರುವ ಪದ್ಧತಿ ಯಾಗಿದ್ದು ಈ ಪದ್ಧತಿಯನ್ನು ಕೇವಲ ಆರ್ಥಿಕ ಕಾರ್ಯಕ್ರಮಗಳಿಂದ ಮಾತ್ರವೆ ನಿರ್ಮೂಲನ ಮಾಡುವುದು ಕಷ್ಟ ಸಾಧ್ಯ ಕೆಲಸವಾಗಿರುತ್ತದೆ. ಜಾಗೃತಿ ಕಾರ್ಯಕ್ರಮಗಳನ್ನು ಏರ್ಪಡಿಸುವುದರ ಮೂಲಕ ದೇವದಾಸಿಯರ ಗುಂಪುಗಳನ್ನು ಸಂಘಟಿತ ಆತ್ಮಸ್ಥೈರ್ಯ ಮೂಡಿಸುವ ಮೂಲಕ ಬೀದಿ ನಾಟಕ, ಹಾಡುಗಳನ್ನು ಹಾಡಿಸುವುದರ ಮೂಲಕ, ಚಿತ್ರಿಚಿತ್ರಗಳು, ಪತ್ರಿಕೆಗಳನ್ನು ಪ್ರದರ್ಶಿಸುವ ಮೂಲಕ, ದೂರದರ್ಶನ ಪ್ರದರ್ಶನ, ಹೊರಾಂಗಣ ಪ್ರವಾಸ, ಅನೌಪಚಾರಿಕ ಶಿಕ್ಷಣ, ಇವುಗಳ ಮೂಲಕ ದೇವದಾಸಿಯರಲ್ಲಿ ಬದಲಾವಣೆ ಮೂಡುತ್ತಿದೆ. ಸ್ಥಳೀಯ ಧಾರ್ಮಿಕ ಮುಖಂಡರು ಈ ಅನಿಷ್ಟ ಪದ್ಧತಿಯ ನಿರ್ಮೂಲನೆಗಾಗಿ ಸಾರ್ವಜನಿಕರಲ್ಲಿ ವ್ಯಾಪಕ ಅಭಿಪ್ರಾಯ ಮೂಡಿಸುತ್ತಿರುತ್ತಾರೆ. ಈ ಅನಿಷ್ಟ ಪದ್ಧತಿಯ ಪರಿಣಾಮಗಳ ಬಗ್ಗೆ ಸಾರ್ವಜನಿಕರಲ್ಲಿ ಹಾಗೂ ದೇವದಾಸಿ ಮಹಿಳೆಯರಲ್ಲಿ ಜಾಗೃತಿ ಮೂಡುತ್ತಿದೆ. ದೇವದಾಸಿ ಆರೋಗ್ಯ ರಕ್ಷಣೆ ಮತ್ತು ಅವರ ಮಕ್ಕಳಿಗೆ ಒಳ್ಳೆ ಭವಿಷ್ಯ ರೂಪಿಸಿಕೊಳ್ಳಲು ಪ್ರೇರೇಪಿಸಲಾಗುತ್ತಿದೆ. ಸಂಬಂಧಪಟ್ಟ ಸಾಲಿಗೆ ನಿಗಧಿಪಡಿಸಿದ ಗುರಿ ಪ್ರಕಾರ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುವುದು.


**ಸಂಪರ್ಕ ಕಛೇರಿ:**

1. ಯೋಜನಾಧಿಕಾರಿಗಳು, ದೇವದಾಸಿ ಪುನರ್ವಸತಿ ಯೋಜನೆ, ಘಟಪ್ರಭಾ ಹುಕ್ಕೇರಿ ತಾಲ್ಲೂಕು, ಬೆಳಗಾಂ ಜಿಲ್ಲೆ.
2. ಯೋಜನಾಧಿಕಾರಿಗಳು, ದೇವದಾಸಿ ಪುನರ್ವಸತಿ ಯೋಜನೆ, ಜಮಖಂಡಿ (ತಾಲ್ಲೂಕು), ಬಿಜಾಪುರ ಜಿಲ್ಲೆ.

ಈ ಮೇಲಿನ ಎಲ್ಲಾ ಯೋಜನೆಗಳ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, ಪ್ರಧಾನ ಕಛೇರಿ, 16ನೇ ಮಹಡಿ, ಜನೋಪಯೋಗಿ ಕಟ್ಟಡ, ಮಹಾತ್ಮಾಗಾಂಧಿ ರಸ್ತೆ, ಬೆಂಗಳೂರು-560 001, ಇವರನ್ನು ಸಂಪರ್ಕಿಸಬಹುದು.

ದೂರವಾಣಿ ಸಂಖ್ಯೆ: 5588250, 5587418, 5587537, 5599901.

## ದೇವದಾಸಿ ಪುನರ್ವಸತಿ ಯೋಜನೆ
(ಬಿಜಾಪುರ ಜಿಲ್ಲೆ)



''ನೇಯ್ಗೆ ತರಬೇತಿ ಪಡೆದ ಫಲಾನುಭವಿಗಳಿಗೆ
ವಸತಿ ಕಾರ್ಯಗಾರಗಳು.''

ಕರ್ಮಣಿ

KARMANI

ಕರ್ಮಣಿ
KARMANI

**ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ನಿಯಮಿತ**

16ನೇ ಮಹಡಿ, ಜನೋಪಯೋಗಿ ಕಟ್ಟಡ, ಮಹಾತ್ಮಾಗಾಂಧಿ ರಸ್ತೆ,
ಬೆಂಗಳೂರು-560 001.
ಫೋನ್: 5587418, 5588250, 5587537

**ಬೆಲೆ: ರೂ. 10.00**

Designed and Produced by Akshara Advertising, Bangalore.